ಅದು ಬಿಟ್ಟು ಯಾವುದೋ ಒಂದು ಪಕ್ಷಕ್ಕೆ, ಒಂದು ಜಾತಿಗೆ, ಒಂದು ಧರ್ಮಕ್ಕೆ ಸೀಮಿತಗೊಳಿಸಬಾರದು ಎಂದು ತಮ್ಮ ಮೂಲಕ ನಾನು ಸದನವನ್ನು ಒತ್ತಾಯಿಸುತ್ತೇನೆ.

3. <u>ಅಧ್ಯಕ್ಷರ ಅಪ್ಪಣೆ ಮೇರೆಗೆ</u> :

ವಿಷಯ :- ಮಾನ್ಯ ಸದಸ್ಯರಾದ ಶ್ರೀ ಬಿ.ಕೆ. ಸಂಗಮೇಶ್ವರ ಅವರಿಗೆ ರಕ್ಷಣೆ ಒದಗಿಸುವ ಬಗ್ಗೆ.

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೆ, ನಿಮ್ಮ ಕಾನೂನು ಸುವ್ಯವಸ್ಥೆಯ ಬಗ್ಗೆ ನೀಡಿರುವ ನಿಲುವಳಿ ಸೂಚನೆಯನ್ನು ನಿಯಮ 69ಗೆ convert ಮಾಡಿ ಅವಕಾಶ ಕೊಟ್ಟಿದ್ದೇನೆ. ಅಧ್ಯಕ್ಷರು ಮಾತನಾಡುವಾಗ ದಯವಿಟ್ಟು ಯಾರು ಮಾತನಾಡಬೇಡಿ. ಸಂಗಮೇಶ್ವರವರದು ಒಂದು ಸಮಸ್ಯೆಯಿದೆ ಅವರು ಮಾತನಾಡಲಿ. ನಾನೇನು ಹೇಳುತ್ತೇನೆಂದರೆ, ನೀವು conclude ಮಾಡಿ. ಈಗಾಗಲೇ ಇವತ್ತು ಅಜೆಂಡಾದಲ್ಲಿ ರೂಲ್ 69 ನಲ್ಲಿ ಎರಡು ವಿಷಯಗಳನ್ನು ಪಟ್ಟಿ ಮಾಡಿದೆ. ಒಂದು ಗಣಿಗಾರಿಕೆಯ ಬಗ್ಗೆ ಮತ್ತೊಂದು ಮಾನ್ಯ ರೇವಣ್ಣನವರು ಕಳುಹಿಸಿರುವುದು ಎರಡು ಅಜೆಂಡಾದಲ್ಲಿ ಇದೆ. ಇದರ ಬಗ್ಗೆಯೂ ಚರ್ಚಿಸಬೇಕಾಗಿದೆ. ಇದಾದ ನಂತರ ಗಮನ ಸೆಳೆಯುವ ಸೂಚನೆಗಳಿವೆ ಇವುಗಳ ಬಗ್ಗೆನೂ ಚರ್ಚಿಸಬೇಕಾಗಿದೆ. ಇದರ ಜೊತೆಗೆ ಬಿಲ್‌ಗಳು ಇವೆ. ಇವೆಲ್ಲವೆನ್ನು ನಾವು ತೆಗೆದುಕೊಂಡು ಚರ್ಚೆ ಮಾಡಬೇಕಾಗುತ್ತದೆ. ಜೊತೆಗೆ ನಿಯಮದಲ್ಲಿ ಎಲ್ಲಾ ವಿಷಯದ ಬಗ್ಗೆ ಎಲ್ಲಾ ಮಾನ್ಯ ಶಾಸಕರು ಮಾತನಾಡಬೇಕೆಂದಿಲ್ಲ. ಅದಕ್ಕಾಗಿ ನಾನು ಏನು ಹೇಳುತ್ತೇನೆಂದರೆ, ಈಗ ರೂಲ್ 69 ಗೆ convert ಮಾಡಿದ್ದೇನೆ. ಈ ವಿಷಯದ ಬಗ್ಗೆ ನಿಮ್ಮ ಪಕ್ಷದ ಪರವಾಗಿ ಯಾರ್‍ಯಾರು ಮಾತನಾಡುತ್ತಾರೆ 3-4 ಜನರ ಹೆಸರು ಕೊಡಿ. ಜೆಡಿಎಸ್ ನಿಂದ ಯಾರು ಮಾತನಾಡುತ್ತಾರೆ ಅವರ ಹೆಸರು ಕೊಡಲಿ. ಭಾರತೀಯ ಜನತಾ ಪಾರ್ಟಿಯಿಂದ ಯಾರ್‍ಯಾರು ಮಾತನಾಡುತ್ತಾರೆ ಅವರ ಹೆಸರುಗಳನ್ನು ಕೊಡಲಿ. ಮೂರು ವಿಷಯಗಳು 69 ನಲ್ಲಿ ಇವೆ. ಹೀಗಾಗಿ ಮೂರು ನಾಲ್ಕು ಜನರು ಯಾವ ವಿಷಯದಲ್ಲಿ ಯಾರ್‍ಯಾರು ಮಾತನಾಡುತ್ತಾರೆಂದು ಪಾರ್ಟಿವೈಸ್ ಹೆಸರುಗಳನ್ನು ಕೊಟ್ಟರೆ ನಾನು ಅವರನ್ನು ಕರೆಯುತ್ತೇನೆ. ಪ್ರತಿಯೊಬ್ಬರು ಕೈ ಎತ್ತಿ ನಿಲ್ಲುವುದು ಬೇಕಾಗಿಲ್ಲ. ಎಲ್ಲರಿಗೂ ಅವಕಾಶ ಕೊಡಲಿಕ್ಕೆ ಸಾಧ್ಯವೇ ಇಲ್ಲ. ಎಲ್ಲರಿಗೂ ಅವಕಾಶ ಕೊಟ್ಟರೆ ಲಾ ಅಂಡ್ ಆರ್ಡರ್ ಬಗ್ಗೆ ಮಾತ್ರ ಚರ್ಚೆ ಮಾಡಿದರೆ ಇಡೀ ದಿವಸ ಇದೇ ಒಂದು ವಿಷಯ ಚರ್ಚಿಸಿದ ಹಾಗೆ ಆಗುತ್ತದೆ. ಹೀಗಾಗಿ 69 ನಲ್ಲಿ ಮೂರು ವಿಷಯಗಳು ಇವೆ. ನಿಮ್ಮ

ನಿಮ್ಮ ಪಕ್ಷದ ಸದಸ್ಯರು ಬೇರೆ ಬೇರೆ ವಿಚಾರದ ಮೇಲೆ ಮಾತನಾಡಲಿ. ನಿಮ್ಮ ಪಕ್ಷದ ವತಿಯಿಂದ ನೀವು ಯಾರನ್ನು ಪಟ್ಟಿ ಮಾಡಿ ಕೊಡುತ್ತೀರಿ ಅವರ ಹೆಸರುಗಳನ್ನು ನಾನು ಕರೆಯುತ್ತೇನೆ ಆಗ ಅವರು ಮಾತನಾಡಲಿ. ತಾವು ಮತ್ತು ಸಂಗಮೇಶ್ವರರವರು ಮಾತನಾಡಿ conclude ಮಾಡಿ. ಮತ್ತೆ ಯಾರ್ಯಾರು ಮಾತನಾಡಬೇಕೆಂದು ನೀವು ಸೂಚಿಸಿದ ಪಟ್ಟಿಯಂತೆ ಅವರ ಹೆಸರನ್ನು ಕರೆಯುತ್ತೇನೆ..ನೋಡಿ ಧ್ರುವನಾರಾಯಣರವರೆ ಈ ರೀತಿ ಅವಕಾಶ ಕೊಟ್ಟುಕೊಂಡು ಹೋದರೆ, ಎಲ್ಲರೂ ಕೈ ಎತ್ತುತ್ತಾರೆ, ಆ ರೀತಿ ಮಾಡಿದರೆ ಆಗುವುದಿಲ್ಲ. ಇದಕ್ಕೆ ನಾವು ಏನಾದರೂ ಸಿಸ್ಟಂ ತರಬೇಕಾಗುತ್ತದೆ. ನಿಮ್ಮ ಪಕ್ಷದ ಕಡೆಯಿಂದ ಲಿಸ್ಟ್ ಬರಲಿ.

ಶ್ರೀ ಟಿ.ಬಿ. ಜಯಚಂದ್ರ :- ಈಗ ಸಂಗಮೇಶ್ವರವರು, ಧ್ರುವನಾರಾಯಣರವರು, ರೋಷನ್ ಬೇಗ್‌ರವರು ಮಾತನಾಡಲಿ.

ಅಧ್ಯಕ್ಷರು :- ಆಗಬಹುದು. ಈಗ ಸಂಗಮೇಶ್ವರ್ ರವರೆ ತಾವು ಮಾತನಾಡಿ. ಧ್ರುವನಾರಾಯಣರವರೆ ನಿಮ್ಮ ಪಕ್ಷದವರು ಹೇಳಿದ್ದಾರೆ, ಅವರು ಮಾತನಾಡಿದ ನಂತರ ನೀವು ಮಾತನಾಡಿ.

ಶ್ರೀ ಬಿ.ಕೆ. ಸಂಗಮೇಶ್ವರ್ (ಭದ್ರಾವತಿ) :- ನಾನು ಭದ್ರಾವತಿ ಕ್ಷೇತ್ರದಿಂದ ಎರಡನೇ ಬಾರಿಗೆ ಜನಗಳ ಆಶಿರ್ವಾದದಿಂದ ಶಾಸಕನಾಗಿ ಆಯ್ಕೆಯಾಗಿದ್ದೇನೆ. ನಮ್ಮ ಭದ್ರಾವತಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮಾಂತರ ಪ್ರದೇಶವಾದ ಬಾರಂದೂರಿನಲ್ಲಿ ಕಾಳಿಕಾಂಬ ಜಾತ್ರೆ 8 ನೇ ತಾರಿಖಿನ ದಿವಸ ನಡೆಯುತ್ತಿತ್ತು. ಆ ಜಾತ್ರೆ ನಡೆಯುವಂಥ ಸಂದರ್ಭದಲ್ಲಿ ಆ ಗ್ರಾಮಾಸ್ಥರು, ನೀವು ಶಾಸಕರು ನೀವು ಬರಲೇಬೇಕೆಂದು ನನಗೊಬ್ಬನಿಗೆ ಆಹ್ವಾನವನ್ನು ಕೊಟ್ಟಿದ್ದರು. ನಾನು ನನ್ನ ಪಾಡಿಗೆ ಹೋಗಿ ದೇವರ ದರ್ಶನ ಮಾಡಿ ದೇವರ ಸಂದೇಶವನ್ನು ಜನರಿಗೆ ತಿಳಿಸುವುದರ ಮೂಲಕ ದೇವರೇ ನಮ್ಮ ಊರಿಗೆ ಶಾಂತಿ ಕೊಟ್ಟು ಅಭಿವೃದ್ಧಿ ಮಾಡಿ ಒಳ್ಳೆಯದು ಮಾಡಲಿ ಎಂದು ನಾನು ಜನರಿಗೆ ತಿಳಿಸಬೇಕೆಂದು ವೇದಿಕೆ ಹತ್ತುವಂಥ ಸಂದರ್ಭದಲ್ಲಿ ಮಾಜಿ ಶಾಸಕರಾದ ಅಪ್ಪಾಜಿಯವರು ಮತ್ತು ಅವರ ಪಟಾಲಂ ಗುಂಪುಗಳು ಏಕಾ ಏಕಿ ಬಂದರು.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಹೆಸರುಗಳನ್ನು ಹೇಳುವುದು ಬೇಡ. ಅವರು ಹೆಸರುಗಳನ್ನು ಏಕೆ ಹೇಳುತ್ತೀರಿ?

ಶ್ರೀ ಬಿ.ಕೆ. ಸಂಗಮೇಶ್ವರ :- ಈಗ ಯಾರು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ಅವರ ಹೆಸರುಗಳನ್ನು ನಾನು ಹೇಳಲೇ ಬೇಕು.

ಅಧ್ಯಕ್ಷರು :- ನೋಡಿ ನೀವು ಇಲ್ಲಿ specific ಆಗಿ ಅವರ ಹೆಸರು ಗಳನ್ನು ಹೇಳಬೇಡಿ.

ಶ್ರೀ ಬಿ.ಕೆ. ಸಂಗಮೇಶ್ವರ :- ಹೆಸರು ಹೇಳಬೇಡ ಎಂದರೆ ಹೇಗೆ? ಈಗಾಗಲೇ ದೂರನ್ನು ಸಹ ಕೊಡಲಾಗಿದೆ.

ಅಧ್ಯಕ್ಷರು :- ಸಂಗಮೇಶ್ವರರವರೆ, ಈ ಸದನದ ಸದಸ್ಯರಲ್ಲದವರ ಹೆಸರುಗಳನ್ನು ಹೇಳಿ ಮಾತನಾಡಿದರೆ ಅವರು ಇಲ್ಲಿ ಬಂದು ಡಿಫೆಂಡ್ ಮಾಡುವುದಕ್ಕೆ ಬರುವುದಿಲ್ಲ. ಹೀಗಾಗಿ ನೀವು ಜನರಲ್ಲಾಗಿ ವಿಷಯ ಪ್ರಸ್ತಾಪಿಸಿ. ಅದರ ಬಗ್ಗೆ ಸರ್ಕಾರದ ಗಮನ ಸೆಳೆಯಿರಿ. ಸರ್ಕಾರದಿಂದ ನಿಮಗೆ ರಕ್ಷಣೆ ಕೊಡಿಸುತ್ತಾರೆ. ಯಾವುದೇ ಒಂದು ವ್ಯಕ್ತಿಯ ಹೆಸರನ್ನು ನೀವು ಇಲ್ಲಿ ಹೇಳಬೇಡಿ.

ಶ್ರೀ ಬಿ.ಕೆ. ಸಂಗಮೇಶ್ವರ :- ಹಾಗಾದರೆ ಆರೋಪಿಯ ಹೆಸರು ಹೇಳಬಾರದೆ?

ಅಧ್ಯಕ್ಷರು :- ಆ ರೀತಿ ಅಲ್ಲ. ನೀವು ಆರೋಪಿ ಎಂದು ಹೇಳುತ್ತೀರಿ, ಅವರು ಇಲ್ಲಿಗೆ ಬಂದು ಡಿಫೆಂಡ್ ಮಾಡುವುದಕ್ಕಾಗುತ್ತದೆಯೆ? ಹಿಂದೆ ಈ ಮನೆಯ ಸದಸ್ಯರಾಗಿದ್ದವರು, ಇವತ್ತು ಅವರು ಈ ಸದನದಲ್ಲಿ ಇಲ್ಲ. ಹೀಗಾಗಿ ನೀವು ವಿಷಯ ಪ್ರಸ್ತಾಪಿಸಿದರೆ ಅವರು ಇಲ್ಲಿಗೆ ಬಂದು ಡಿಫೆಂಡ್ ಮಾಡಲಿಕ್ಕೆ ಆಗುತ್ತದೆಯೆ? ಹೀಗಾಗಿ ಅವರ ಹೆಸರು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :- ದಯಮಾಡಿ ಅದನ್ನು ಕಡತದಿಂದ ತೆಗೆಸಿ ಹಾಕಿ.

ಅಧ್ಯಕ್ಷರು :- ನಾನು ಅದನ್ನು ನೋಡುತ್ತೇನೆ.

ಶ್ರಿ ಬಿ.ಕೆ. ಸಂಗಮೇಶ್ವರ :- ಆಯಿತು. ನಾನು ಜಾತ್ರೆಯಿಂದ ಬರುವಂಥ ಸಂದರ್ಭದಲ್ಲಿ ಅವರು ಮತ್ತು ಅವರ ಪಟಾಲಂ ಗುಂಪುಗಳು ಏಕಾ ಏಕಿ ನನ್ನನ್ನು ಅಡ್ಡಗಟ್ಟಿ ಎರಡು ಸೈಜ್ ಕಲ್ಲು ತೆಗೆದುಕೊಂಡು ನನ್ನ ಮೇಲೆ ಎತ್ತಿ ಹಾಕಿ ಕೊಲೆ ಮಾಡುವುದಕ್ಕೆ ಪ್ರಯತ್ನಿಸಿದರು. ಆಗ ನನ್ನ ಗನ್‌ಮ್ಯಾನ್ ನನ್ನನ್ನು ರಕ್ಷಿಸಿ ಕರೆದುಕೊಂಡು ಬಂದರು. ಅವರು ಎಲ್ಲಾ ಸೇರಿಕೊಂಡು ನನ್ನ ಮೇಲೆ ಸುಳ್ಳು ಕಂಪ್ಲೇಂಟ್ ಕೊಟ್ಟಿದ್ದಾರೆ.

ಮೊದಲು ನಾನು ಕಂಪ್ಲೇಂಟ್ ಕೊಟ್ಟಿದ್ದೆ. ಅಲ್ಲಿ ಪೋಲಿಸ್‌ನವರು ಇದ್ದಾರೆ. ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ...ನಾನು ಕಂಪ್ಲೇಂಟ್ ಕೊಟ್ಟಂಥ ಸಂದರ್ಭದಲ್ಲಿ ಕೊಲೆ ಮಾಡಿಸಿಕೊಂಡವನಿಗೂ ಸೆಕ್ಷನ್ 307, ಕೊಲೆ ಮಾಡುವುದಕ್ಕೆ ಬಂದವನಿಗೂ ಸೆಕ್ಷನ್ ಸೆಕ್ಷನ್ 307. ಪೋಲಿಸ್‌ನವರು ಹೇಗೆ ಎಂದರೆ, "ಅಂದರಿಕಿ ಮಂಚಿವಾಡು ಅನಂತಯ್ಯ" ಎಂದು ತೆಲುಗಿನವರು ಒಂದು ಗಾದೆ ಹೇಳುತ್ತಾರೆ. ಯಾರನ್ನು ಮೈಮೇಲೆ ಹಾಕಿಕೊಳ್ಳದೆ ಆರೋಪ ಯಾರು ಮಾಡಿರುತ್ತಾನೋ ಅವರದು ಕಂಪ್ಲೇಂಟ್, ಹೊಡೆತ ತಿಂದವನಿಗೂ ಕಂಪ್ಲೇಂಟ್. ಈ ರೀತಿಯಾಗಿ ಇಬ್ಬರಿಗೂ ಸೆಕ್ಷನ್ 307 ಹಾಕಿದರು. ಇದರ ವಿರುದ್ದವಾಗಿ ನಾವು 12 ನೇ ತಾರೀಖಿನ ದಿವಸ ನಮ್ಮ ಪಕ್ಷದ ವತಿಯಿಂದ ಬೃಹತ್ ಪ್ರತಿಭಟನೆ ಮಾಡಿದೆವು. ಆದರೂ ಕೂಡ ಬಗ್ಗಲಿಲ್ಲ. ಆದಾದ ಮೇಲೆ ಆ ಗ್ರಾಮದಲ್ಲಿ ದೇವೇಂದ್ರಗಿರಿ ಎನ್ನುವವರ ಮಗ ರವೀಂದ್ರಗಿರಿ ಎನ್ನುವವರು ತೀರ್ಥಹಳ್ಳಿಯಲ್ಲಿ ಪೋಲಿಸ್ ಆಗಿ ಕೆಲಸ ಮಾಡುತ್ತಿದ್ದಾನೆ. ಆ ಪೋಲಿಸ್ ರಕ್ಷಣೆ ಮಾಡುವುದು ಬಿಟ್ಟು ಅವನು ಮತ್ತು ಅವರ ಅಪ್ಪ ಇಬ್ಬರೂ ಸೇರಿ ನನ್ನ ಮೇಲೆ ಹಲ್ಲೆ ಮಾಡಿದರೂ ಅವನನ್ನು ಇದುವರೆವಿಗೂ ಸಸ್‌ಪೆಂಡ್ ಮಾಡಲಿಲ್ಲ. ನನ್ನನ್ನು ರಕ್ಷಿಸಿದಂಥ ಗನ್ ಮ್ಯಾನ್‌ನನ್ನು ನಿನ್ನೆ ದಿವಸ ಎಸ್‌ಪಿ ಯವರು ಸಸ್‌ಪೆಂಡ್ ಮಾಡಿದ್ದಾರೆ. ನಾನು ಅಲ್ಲಿಗೆ ಹೋಗುವಂಥ ಸಂದರ್ಭದಲ್ಲಿ ಹೇಳಿದ್ದೆ, ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಇನ್ಸ್‌ಪೆಕ್ಟರ್ ಟಿ.ಎಂ.ಬಸವರಾಜರವರಿಗೆ "ನೋಡಿ ಭದ್ರಾವತಿ ಅತಿ ಸೂಕ್ಷ್ಮವಾದ ಪ್ರದೇಶವೆಂದು ಘೋಷಣೆಯಾಗಿದೆ, ಅವರು ಗಲಾಟೆ ಮಾಡುವ ಸಂಭವವಿದೆ, ನಾನು ಹೋಗುತ್ತಿದ್ದೇನೆ ನೀವು ನನಗೆ ರಕ್ಷಣೆ ಕೊಡಿ" ಎಂದು ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಡಿಎಸ್‌ಪಿ ಯವರಿಗೂ ನಾನು ಫೋನು ಮುಖಾಂತರ ಹೇಳಿದರೂ ಅವರು ಅಲ್ಲಿಗೆ ಬಾರದೆ ಇವತ್ತು ಈ ಗಲಾಟೆಗೆ ಕಾರಣಕರ್ತರಾಗಿದ್ದಾರೆ. ಗ್ರಾಮಾಂತರ ಸರ್ಕಲ್ ಇನ್ಸ್‌ಪೆಕ್ಟರ್ ಆದ ಟಿ.ಎಂ.ಬಸವರಾಜು, ಮತ್ತು ಡಿವೈಎಸ್‌ಪಿ ಯವರ ಮೇಲೆ ಮತ್ತು ಇನ್ಸ್‌ಪೆಕ್ಟರ್ ರವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಅದೇ ರೀತಿಯಾಗಿ ನನಗೆ ನೀವು ಇವತ್ತಿನ ದಿವಸ ರಕ್ಷಣೆಯನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ನನ್ನ ಮೇಲೆ ದಾಖಲು ಮಾಡಿರುವ ಸುಳ್ಳು ಕೇಸ್‌ಗಳನ್ನು ವಜಾ ಮಾಡಬೇಕು. ಇವತ್ತಿನ ದಿವಸ ಭದ್ರಾವತಿ ಕ್ಷೇತ್ರದಲ್ಲಿ ಅಶಾಂತಿಯನ್ನು ಮೂಡಿಸುತ್ತಿದ್ದಾರೆ. 16ನೇ ತಾರೀಖಿನ ದಿವಸ ಅವರೆಲ್ಲರೂ ಕೂಡ ಪ್ರತಿಭಟನೆ ಮಾಡಿದ್ದಾರೆ.

ಅಧ್ಯಕ್ಷರು :- ಈಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು) :- ಸನ್ಮಾನ್ಯ ಅಧ್ಯಕ್ಷರೆ, ಈ ಘಟನೆಗಳಿಗೆ ಸಂಬಂಧಪಟ್ಟಂತೆ ವಿವರವಾದ ಮಾಹಿತಿ ನನ್ನ ಹತ್ತಿರ ಇದೆ. ಮಾನ್ಯ ಸದಸ್ಯರು ಹೇಳಿರುವಂತೆ ಮಾರಿಕಾಂಬ ಜಾತ್ರೆಯ ಸಂದರ್ಭದಲ್ಲಿ ಇವರು ಹೋದಾಗ ಮಾಜಿ ಶಾಸಕರು ತಡೆದಾಗ ಎರಡು ಗುಂಪುಗಳ ನಡುವೆ ಘರ್ಷಣೆಯಾಗಿದೆ. ಇದನ್ನು ನಾನು ಸಿಓಡಿ ಗೆ ರೆಫರ್ ಮಾಡುತ್ತೇನೆ. ಸಿಓಡಿ ಯಿಂದ ವರದಿ ಬಂದ ಮೇಲೆ ಸದರಿ ವರದಿಯ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳೋಣ. ತಾವು ಶಾಂತವಾಗಿರಿ, ಸಿಓಡಿ ತನಿಖೆಯು ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಇವತ್ತೆ ಸಿಓಡಿ ತನಿಖೆಗೆ ಆದೇಶ ಮಾಡುತ್ತೇನೆ.

ಶ್ರೀ ಬಿ.ಕೆ. ಸಂಗಮೇಶ್ವರ :- ಮೊದಲು ಈ ಇಬ್ಬರು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಆನಂತರ ಸಿಓಡಿ ತನಿಖೆ ಮಾಡುವುದು ಒಳ್ಳೆಯದು.

ಶ್ರೀ ಡಿ.ಕೆ. ಶಿವಕುಮಾರ್ :- ಸಿಓಡಿ ರೆಫರ್ ಮಾಡಿ ಇಬ್ಬರು ಅರ್ಧಂಬರ್ಧ ಮಾಡಿದ್ದಾರೆ ಆಮೇಲೆ ನೋಡೋಣವೆಂದು ಈಗ ಸಿಓಡಿ ಗೆ ರೆಫರ್ ಮಾಡುತ್ತೀನೆಂದು ಹೇಳಿದ್ದೀರಿ. ತಾವು ಹೇಳಿರುವುದಕ್ಕೆ ಸಂತೋಷ ವ್ಯಕ್ತಪಡಿಸುತ್ತೇವೆ. ಆದರೆ, ಮುಖ್ಯವಾದದ್ದು ಇದಲ್ಲ. ನಮಗೂ ಕೂಡ ಇದೆಲ್ಲಾ ಅರ್ಥವಾಗುತ್ತದೆ. ಏಕೆಂದರೆ, ನಾವು ರಾಜಕಾರಣ ಮಾಡಿದ್ದೇವೆ. ತಾವು ಎದ್ದುನಿಂತುಕೊಂಡು ಬಹಳ ತುರ್ತಾಗಿ ಸಿಓಡಿ ತನಿಖೆಗೆ ಆದೇಶ ಮಾಡಿರುವುದು ಸಂತೋಷ. ಆದರೆ, ನಮ್ಮ ಬೇಡಿಕೆ ಏನೆಂದರೆ, ತಾವು ಮಾನ್ಯ ಸದಸ್ಯರ ಜಿಲ್ಲೆಯವರು ಮತ್ತು ಪಕ್ಕದ ಮನೆಯವರಾಗಿದ್ದೀರಿ. ಆದ್ದರಿಂದ, ತಾವು ದಯವಿಟ್ಟು ಅವರಿಗೆ ಸಂಪೂರ್ಣವಾದಂಥ ಬೆಂಬಲ ಕೊಟ್ಟು ಭದ್ರತೆಯ ವ್ಯವಸ್ಥೆ ಮಾಡಬೇಕು.

ಡಾ॥ ಬಿ.ಎಸ್. ಯಡಿಯೂರಪ್ಪ :- ಎಲ್ಲಾ ಶಾಸಕರಿಗೆ ಮತ್ತು ರಾಜ್ಯದ ಪ್ರತಿಯೊಬ್ಬ ನಾಗರೀಕನಿಗೆ ರಕ್ಷಣೆ ಕೊಡತಕ್ಕಂಥದ್ದು ನನ್ನ ಸರ್ಕಾರದ ಕರ್ತವ್ಯವಾಗಿದೆ. ಅವರಿಗೆ ಖಂಡಿತ ರಕ್ಷಣೆ ಕೊಡುತ್ತೇವೆ. ಈ ರೀತಿಯಾದ ಘಟನಾವಳಿಗಳು ಆದಾಗ ರಕ್ಷಣೆ ಕೊಡುವುದು ನನ್ನ ಕರ್ತವ್ಯ. ಆದ್ದರಿಂದ, ಅವರಿಗೆ ರಕ್ಷಣೆಯನ್ನು ಕೊಡುತ್ತೇವೆ.

ಶ್ರೀ ಬಿ.ಕೆ. ಸಂಗಮೇಶ್ವರ :- ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಆದರೆ. ಈ ಕರ್ತವ್ಯದಲ್ಲಿ ಲೋಪ ಮಾಡಿರುವ ಸರ್ಕಲ್ ಇನ್‌ಸ್ಪೆಕ್ಟರ್ ಟಿ.ಎಂ.ಬಸವರಾಜು ಮತ್ತು ಡಿವೈಎಸ್‌ಪಿ ರವರನ್ನು ಮೊದಲು ಸಸ್ಪೆಂಡ್

ಮಾಡಿ ಆನಂತರ ಸಿಓಡಿ ತನಿಖೆ ಮಾಡಿಸಿ. ಈ ರೀತಿಯಾಗಿ ಮಾಡಿದರೆ ಮಾತ್ರ ನಮಗೆ ನ್ಯಾಯ ಸಿಗುತ್ತದೆ. ದಯಮಾಡಿ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕು.

ಡಾ॥ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಇಲಾಖೆ ಇದರ ಬಗ್ಗೆ ಪರಿಶೀಲನೆ ಮಾಡುತ್ತದೆ. ಆ ಘಟನಾವಳಿಯ ಬಗ್ಗೆ ಸಿಓಡಿ ತನಿಖೆ ಮಾಡಿದಾಗ ಎಲ್ಲಾ ವಿಷಯಗಳೂ ಹೊರಕ್ಕೆ ಬರುತ್ತದೆ. ನಾನು ಮಾನ್ಯ ಶಾಸಕರಲ್ಲಿ ವಿನಂತಿ ಮಾಡುವುದೇನೆಂದರೆ, ಅವರು ನನ್ನ ಹತ್ತಿರ ಮಾತನಾಡಿದ್ದಾರೆ ಮತ್ತೆ ಇವರು ಅಲ್ಲಿ ದೂರನ್ನು ಸಹ ಕೊಟ್ಟಿದ್ದರೆ. ಅವರ ಅಪೇಕ್ಷೆಯಂತೆ ಇದರ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ಆಗಬೇಕು, ಆರೋಪಿಗಳು ಯಾರೇ ಇದ್ದರೂ ಕೂಡ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂಬ ಸದುದ್ದೇಶದಿಂದ ಸಿಓಡಿಗೆ ರೆಫರ್ ಮಾಡಿದ್ದೇನೆ. ಆ ಸಂದರ್ಭದಲ್ಲಿ ಯಾರ್ಯಾರು ಪಾಲುಗೊಂಡಿದ್ದಾರೆಂಬ ಸತ್ಯವೆಲ್ಲವೂ ತನಿಖೆಯಿಂದ ಹೊರಕ್ಕೆ ಬರುತ್ತದೆ. ಆದ್ದರಿಂದ, ಈಗ ನಾನು ನಮ್ಮ ಇಲಾಖೆಯ ಅಧಿಕಾರಿಗಳ ಮೇಲೆ ಏಕಾ ಏಕಿ ಸಂಶಯ ಪಡುವುದಕ್ಕೆ ಸಾಧ್ಯವಿಲ್ಲ. ತನಿಖೆಯಾಗುವುದಕ್ಕೆ ನಾವೆಲ್ಲರೂ ಕೂಡ ಒಟ್ಟಾಗಿ ಪೊಲೀಸ್ ಇಲಾಖೆಗೆ ಸಹಕಾರವನ್ನು ಕೊಡಬೇಕು. ಘಟನೆ ನಡೆದ ದಿವಸ ಪೊಲೀಸ್‌ನವರು ಮಧ್ಯ ಪ್ರವೇಶ ಮಾಡಿ ನಿಮಗೆ ರಕ್ಷಣೆ ಕೊಡದಿದ್ದರೆ ಬೇರೆ ರೀತಿಯ ಘಟನಾವಳಿ ನಡೆಯುತ್ತಿತ್ತು. ಆದ್ದರಿಂದ, ಇದರ ಬಗ್ಗೆ ಮೊದಲು ತನಿಖೆ ಆಗಲಿ.

ಶ್ರೀ ಬಿ.ಕೆ. ಸಂಗಮೇಶ್ವರ :- ಮಾನ್ಯ ಅಧ್ಯಕ್ಷರೆ, ನಾವು ನೇರವಾಗಿ ಪೊಲೀಸ್ ಅಧಿಕಾರಿಗಳ ಮೇಲೆ ಆರೋಪ ಮಾಡಿರುವುದರಿಂದ ಇನ್ನು ಮುಂದೆ ಅವರು ನಮಗೆ ರಕ್ಷಣೆ ಮಾಡುತ್ತಾರೆಂಬುದರ ಬಗ್ಗೆ ಏನು ಗ್ಯಾರಂಟಿ ಇದೆ?

ಅಧ್ಯಕ್ಷರು :- ಕ್ರಮ ಕೈಗೊಳ್ಳುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಬಿ.ಕೆ. ಸಂಗಮೇಶ್ವರ :- ಮೊದಲು ಪೊಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು.

(ಗೊಂದಲ)

ಅಧ್ಯಕ್ಷರು :- ರಕ್ಷಣೆ ಕೊಡುತ್ತೇವೆಂದು ಮತ್ತು ಈ ಪ್ರಕರಣವನ್ನು ಸಿಓಡಿ ತನಿಖೆಗೆ ವಹಿಸುತ್ತೇನೆಂದು ಹೇಳಿದ್ದಾರೆ. ದಯವಿಟ್ಟು ತಾವು ಸಹಕಾರ ಕೊಡಿ.

(ಗೊಂದಲ)

ಶ್ರೀ ಬಿ.ಕೆ. ಸಂಗಮೇಶ್ವರ :- ಕರ್ತವ್ಯ ಲೋಪ ಮಾಡಿರುವವರನ್ನು ಮೊದಲು ಸಸ್ಪೆಂಡ್ ಮಾಡಿದರೆ ನಮಗೆ ನ್ಯಾಯ ಸಿಗುತ್ತದೆ. ದಯಮಾಡಿ ನನಗೆ ನ್ಯಾಯ ದೊರಕಿಸಿಕೊಡಿ. ಅವರು ಕರ್ತವ್ಯ ಲೋಪ ಮಾಡಿಲ್ಲವೆಂದು ಸಿಓಡಿ ತನಿಖೆಯಿಂದ ತಿಳಿದು ಬಂದರೆ ಅವರಿಗೆ ಮತ್ತೆ ಕೆಲಸ ಕೊಡಿ.

(ಗೊಂದಲ)

ಅಧ್ಯಕ್ಷರು :- ನಿಮಗೆ ಯಾರಿಂದ ತೊಂದರೆಯಾಗಿದೆ ಎಂಬ ವಿಷಯವನ್ನು ಈಗಾಗಲೇ ತಾವು ಹೇಳಿದ್ದೀರಿ. ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ.ಕೆ. ಸಂಗಮೇಶ್ವರ :- ಸಿಓಡಿ ವರದಿಯಲ್ಲಿ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ತಿಳಿಸಿದರೆ ಮತ್ತೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಿ. ಒಂದು ವೇಳೆ ಅವರು ಕೆಟ್ಟ ಕೆಲಸ ಮಾಡಿದ್ದರೆ ಮನೆಗೆ ಹೋಗಲಿ.

(ಗೊಂದಲ)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಗಲಾಟೆ ಆದ ಸ್ಥಳಕ್ಕೆ ಅಧಿಕಾರಿಗಳು ಹೋಗುವುದಕ್ಕೆ ತಯಾರಿಲ್ಲವೆಂದರೆ ಅವರು ಯಾವ ರೀತಿಯಾಗಿ ಕೆಲಸ ಮಾಡಿದ್ದಾರೆ ಎಂಬುದರ ಬಗ್ಗೆ ನೀವೇ ಹೇಳಿ?

ಶ್ರೀ ಬಿ.ಕೆ.ಸಂಗಮೇಶ್ವರ :- ಇದರಲ್ಲಿ ಅವರೂ ಸಹ ಸಂಪೂರ್ಣವಾಗಿ ಭಾಗಿಗಳಾಗಿದ್ದಾರೆ.

(ಗೊಂದಲ)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಒಬ್ಬ ಚುನಾಯಿತ ಪ್ರತಿನಿಧಿ ಹೋಗಿರುವ ಸ್ಥಳದಲ್ಲಿ ಗಲಾಟೆಯಾಗುತ್ತಿರುವಾಗ ಆ ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಹೋಗಿಲ್ಲದೆ ಇರುವುದು ತಪ್ಪು. ಆದ್ದರಿಂದ, ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಸಿಓಡಿ ತನಿಖೆ ಮಾಡಿಸುವಂಥದ್ದಕ್ಕೆ ನಾವು ಸ್ವಾಗತ

ಮಾಡುತ್ತೇವೆ. ಆದರೆ, ಗಲಾಟೆ ಆಗುತ್ತದೆಂದು ಗೊತ್ತಿದ್ದರೂ ಕೂಡ ಅಧಿಕಾರಿ ಸ್ಥಳಕ್ಕೆ ಹೋಗದೆ ಇರುವುದರಿಂದ ಅವರ ಕರ್ತವ್ಯ ಲೋಪವಾಗುತ್ತದೆ. ಆದ್ದರಿಂದ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಶಾಸಕರಿಗೆ ಈ ರೀತಿಯಾದರೆ ಸಾಮಾನ್ಯ ಮನುಷ್ಯನಿಗೆ ಯಾವ ರೀತಿ ರಕ್ಷಣೆ ಕೊಡುತ್ತಾರೆ. ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳಲೇ ಬೇಕು. ಮೊದಲು ಅವರನ್ನು ಸಸ್ಪೆಂಡ್ ಮಾಡಿ ಆನಂತರ ಸಿಓಡಿ ತನಿಖೆ ಮಾಡಿಸಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೆ, ಈಗ ಸಿಓಡಿ ತನಿಖೆಯಾದರೆ ಮಾನ್ಯ ಸಂಗಮೇಶ್ವರರವರು ತನಿಖೆಗೆ ಹೋಗಬೇಕು. ಆ ಅಧಿಕಾರಿಗಳನ್ನು ಇಟ್ಟುಕೊಂಡು ಸಿಓಡಿ ತನಿಖೆ ಮಾಡಿದರೆ ಮಾನ್ಯ ಸಂಗಮೇಶ್ವರ ರವರಿಗೆ ನ್ಯಾಯ ಸಿಗುವುದಿಲ್ಲ. ಇವತ್ತಿನ ದಿವಸ ಏನಾಗಿದೆ ಎಂದರೆ, ನಮ್ಮ ಸಾಮಾಜಿಕ ಬದುಕಿನಲ್ಲಿ ಶಾಸಕರಿಗೆ ರಕ್ಷಣೆ ಇಲ್ಲದಂತಾಗಿದೆ. ಆ ಸಮಾರಂಭಕ್ಕೆ ನಾನೂ ಸಹ ಹೋಗ ಬೇಕಾಗಿತ್ತು. ಆದರೆ, ಅನಿವಾರ್ಯ ಕಾರಣದಿಂದ ಹೋಗಲಿಕ್ಕೆ ಆಗಲಿಲ್ಲ. ಅಂಥ ಸಂದರ್ಭದಲ್ಲಿ ಶಾಸಕರಿಗೆ ರಕ್ಷಣೆ ಸಿಗದಿದ್ದರೆ ಪೊಲೀಸ್ ಅಧಿಕಾರಿಗಳು ಏನು ಮಾಡುತ್ತಿದ್ದರು? ಆದ್ದರಿಂದ, ಸಸ್ಪೆಂಡ್ ಮಾಡದಿದ್ದರೆ ಅವರಿಗೆ ನ್ಯಾಯ ಸಿಗುವುದಿಲ್ಲ.

(ಗೊಂದಲ)

ಅಧ್ಯಕ್ಷರು :- ಸರ್ಕಾರದ ಕಡೆಯಿಂದ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಕ್ರಮ ತೆಗೆದುಕೊಳ್ಳುತ್ತೇನೆಂದು ಸಹ ಹೇಳಿದ್ದಾರೆ.

(ಗೊಂದಲ)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿರುವುದು ಉತ್ತರವಲ್ಲ.

(ಗೊಂದಲ)

ಅಧ್ಯಕ್ಷರು :- ಈ ರೀತಿಯಾದರೆ ಬೇರೆ ವಿಷಯಗಳ ಬಗ್ಗೆ ಚರ್ಚೆ ಮಾಡುವುದು ಬೇಡವೇ? ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ಈಗಾಗಲೇ ತಮಗೆ ಅವಕಾಶ ಕೊಟ್ಟಿದ್ದೇನೆ. ಸರ್ಕಾರದ ಗಮನಕ್ಕೂ ಕೂಡ ತಂದಿದ್ದೀರಿ. ಏನು ಹೇಳಬೇಕೋ ಅದನ್ನು ಅವರು ಈಗಾಗಲೇ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ರೆಸ್ಪಾನ್ಸ್ ಮಾಡಿದ್ದಾರೆ. ಮತ್ತೆ ನೀವು ಅದನ್ನೆ ಮಾತನಾಡಿದರೆ ನಾನು ಏನು ಮಾಡಬೇಕು?

(ಗೊಂದಲ)

ಶ್ರೀ ಬಿ.ಕೆ. ಸಂಗಮೇಶ್ವರ :- ಮೊದಲು ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು.

ಅಧ್ಯಕ್ಷರು :- ಕ್ರಮ ಕೈಗೊಳ್ಳುವುದಕ್ಕೆ ಅವರಿಗೆ ಅವಕಾಶ ಕೊಡಿ.

ಶ್ರೀ ಬಿ.ಕೆ. ಸಂಗಮೇಶ್ವರ :- ಸತ್ಯಾಸತ್ಯತೆ ಬಗ್ಗೆ ವಿಚಾರಣೆ ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಅಧಿಕಾರ ಇದೆ. ಅಕಸ್ಮಾತ್ ಅವರು ಒಳ್ಳೆಯ ಕೆಲಸ ಮಾಡಿದ್ದರೆ ಅವರುಗಳಿಗೆ ಏನೂ ಮಾಡುವುದು ಬೇಡ. ಆದರೆ, ಮಾಡಿದ್ದಾರೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ವರದಿ ಬರುವವರೆಗಾದರೂ ಅವರುಗಳನ್ನು ಸಸ್ಪೆಂಡ್ ಮಾಡಲಿ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ತಾವು ಈ ಸದನದ ಅಧ್ಯಕ್ಷರಾಗಿದ್ದೀರಿ. ಆದ್ದರಿಂದ, ತಾವು ಸೂಚಿಸಬಹುದು.

ಅಧ್ಯಕ್ಷರು :- ಇದಕ್ಕೆಲ್ಲಾ ನಾನು ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ. ಈ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಪದೇ ಪದೇ ಅದನ್ನೆ ಹೇಳುವುದು ಬೇಡ. ಈಗ ಬೇರೆ ವಿಷಯ ತೆಗೆದುಕೊಳ್ಳೋಣ.

ಶ್ರೀ ಬಿ.ಕೆ. ಸಂಗಮೇಶ್ವರ :- ಮಾನ್ಯ ಅಧ್ಯಕ್ಷರೆ, ಇದೊಂದು ಮಾರಣಾಂತಿಕ ಹಲ್ಲೆ ಮತ್ತೆ ಕೊಲೆ ಪ್ರಯತ್ನ ಕೂಡ ಆಗಿದೆ.

(ಗೊಂದಲ)

ಅಧ್ಯಕ್ಷರು :- ನೀವು ಸಹ ಸರ್ಕಾರವನ್ನು ನಡೆಸಿದ್ದೀರಿ.

ಶ್ರೀ ನೆ.ಲ. ನರೇಂದ್ರಬಾಬು :- ಅಧಿಕಾರಿಗಳು ಯಾರ ಕೈಗೊಂಬೆ ಯಾಗಿದ್ದಾರೆಂಬುದು ಗೊತ್ತಾಗಬೇಕು. ಒಬ್ಬ ಸದಸ್ಯ ತನ್ನ ಕ್ಷೇತ್ರದಲ್ಲಿನ ಕಾರ್ಯಕ್ರಮಕ್ಕೆ ಹೋದಾಗ ಅಲ್ಲಿ ತನಗೆ ಅಪಾಯವಿದೆ ಎಂದು ಹೇಳಿದಾಗಲೂ ಕೂಡ ಅಲ್ಲಿಗೆ ಅಧಿಕಾರಿ ಹೋಗಿ ಸೂಕ್ತ ರಕ್ಷಣೆ ಕೊಡದೆ ಇರುವಂಥದ್ದು ಕರ್ತವ್ಯ ಲೋಪವಾಗಿದೆ. ಆದ್ದರಿಂದ, ಅಂಥ ಅಧಿಕಾರಿಗಳನ್ನು ತಾವು ಏತಕ್ಕೆ ರಕ್ಷಣೆ ಮಾಡುತ್ತೀರಿ?

(ಗೊಂದಲ)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ನೀವು ಈ ಸದನದ ಅಧ್ಯಕ್ಷರಾಗಿದ್ದೀರಿ. ಆದ್ದರಿಂದ, ಸದಸ್ಯರಿಗೆ ತಾವು ರಕ್ಷಣೆ ಕೊಡಿಸಬೇಕು. ಆದ್ದರಿಂದ, ತಾವು ಇದರ ಬಗ್ಗೆ ಸರ್ಕಾರಕ್ಕೆ ಡೈರಕ್ಷನ್ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಮುಖ್ಯ ಮಂತ್ರಿಗಳು ಸರ್ಕಾರವನ್ನು ನಡೆಸುತ್ತಾರೆ. ನೀವು ಇಲ್ಲಿ ಏನು ಪ್ರಸ್ತಾಪ ಮಾಡಬೇಕಾಗಿತ್ತೋ ಅದನ್ನು ಮಾಡುವುದಕ್ಕೆ ನಾನು ಅವಕಾಶ ಕೊಟ್ಟಿದ್ದೀನಿ. ಸರ್ಕಾರ ಇದಕ್ಕೆ ಉತ್ತರ ಕೊಟ್ಟಿದೆ. ಇಲ್ಲಿ ಎಲ್ಲದಕ್ಕೂ ಅಂತಿಮವಾದ ನಿರ್ಣಯ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಮತ್ತೆ ಎಲ್ಲರೂ ಹೇಳುವುದನ್ನು ಸಹ ಕೇಳುವುದಕ್ಕೆ ಆಗುವುದಿಲ್ಲ. ನೀವು ಪ್ರಸ್ತಾಪ ಮಾಡಿದ್ದೀರಿ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ, ಪದೇ ಪದೇ ಅದೇ ವಿಷಯ ಹೇಳುವುದು ಬೇಡ. ಈಗ ಮುಂದಿನ ವಿಷಯ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ.ಕೆ. ಸಂಗಮೇಶ್ವರ :- ಸಿಓಡಿ ತನಿಖೆ ಮಾಡುವುದರ ಬಗ್ಗೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ, ಮೊದಲು ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಸುಭಾಷ್ ಆರ್. ಗುತ್ತೇದಾರ್‌ರವರೆ, ತಮ್ಮ ವಿಷಯವನ್ನು ಪ್ರಸ್ತಾಪ ಮಾಡಿ..(ಗೊಂದಲ) ನೀವು ಸರ್ಕಾರವನ್ನು ನಡೆಸಿದ್ದೀರಿ. ಸರ್ಕಾರ ಯಾವರೀತಿಯಾಗಿ ನಡೆಯುತ್ತದೆ ಎಂಬುದು ನಿಮಗೂ ಸಹ ಗೊತ್ತಿದೆ. ಎಲ್ಲಾ ವಿಷಯದ ಬಗ್ಗೆ ಇಲ್ಲಿ ನಿರ್ಣಯ ತೆಗೆದುಕೊಳ್ಳವುದಕ್ಕೆ ಆಗುವುದಿಲ್ಲ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಸಸ್ಪೆಂಡ್ ಮಾಡುತ್ತೇವೆಂದು ಆಶ್ವಾಸನೆ ಕೊಡಲಿ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಅಲ್ಲಿ ಗಲಾಟೆಯಾಗಿರತಕ್ಕಂಥದ್ದು ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿದೆ. ಈಗ ಅದರ ಬಗ್ಗೆ ಸಿಓಡಿ ತನಿಖೆ ಮಾಡಿಸುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ನೆ.ಲ. ನರೇಂದ್ರಬಾಬು :- ಜನಸಾಮಾನ್ಯರಿಗೂ ಸಹ ಇಲ್ಲಿ ರಕ್ಷಣೆ ಇಲ್ಲ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)

ಅಧ್ಯಕ್ಷರು :- ಶಾಸಕರ ತಮ್ಮ ವೈಯಕ್ತಿಕ ವಿಷಯದ ಬಗ್ಗೆ ಈ ರೀತಿಯಾಗಿ ಪದೇ ಪದೇ ಸದನ ಬಾವಿಗೆ ಬರತಕ್ಕಂಥದ್ದು ಒಳ್ಳೆಯದಲ್ಲ. ಸದನದಲ್ಲಿ ಬೇರೆ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಈ ರೀತಿಯಾಗಿ ಪದೇ ಪದೇ ಸದನದ ಬಾವಿಗೆ ಬರತಕ್ಕಂಥದ್ದು, ಸದನದ ಕಾರ್ಯಕಲಾಪಕ್ಕೆ ಅಡೆತಡೆ ಮಾಡುವಂತದ್ದು ಸರಿಯಲ್ಲ. ಮಾತನಾಡುವುದಕ್ಕೆ ಸಾಕಷ್ಟು ವಿಷಯಗಳಿವೆ. ಚರ್ಚೆ ಮಾಡುವುದನ್ನು ಬಿಟ್ಟು ಈ ರೀತಿಯಾಗಿ ಪದೇಪದೇ ಡಿಸ್ಟರ್ಬ್ ಮಾಡಿದರೆ ಸದನ ನಡೆಸುವುದು ಹೇಗೆ? ತಾವೆಲ್ಲರೂ ತಮ್ಮ ಸ್ಥಳಗಳಿಗೆ ದಯವಿಟ್ಟು ಹೋಗಿ. ನಿಮ್ಮ ನಾಯಕರ ಜೊತೆ ನೀವುಗಳು ಮಾತನಾಡಿ. ಆನಂತರ ನಿಮ್ಮ ನಾಯಕರು ಮತ್ತು ನೀವು ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಕುಳಿತು ಮಾತನಾಡಿ. ಸದನದಲ್ಲಿ ಎಲ್ಲದರ ಬಗ್ಗೆಯೂ ನಿರ್ಣಯವಾಗಬೇಕು ಎಂದು ಹೇಳತಕ್ಕಂಥದ್ದು ಸರಿಯಲ್ಲ. ನಿಮ್ಮ ನಾಯಕರನ್ನು ಕರೆದುಕೊಂಡು ಮುಖ್ಯಮಂತ್ರಿಗಳ ಜೊತೆ ಮಾತನಾಡಿ. ಈಗಾಗಲೇ ಎಲ್ಲಾ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಆದರೆ, ಮತ್ತೆ ಮತ್ತೆ ಅದನ್ನೆ ಮಾತನಾಡಿದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಸಿಓಡಿ ತನಿಖೆ ಮಾಡಿಸುತ್ತೇವೆ ಎಂಬ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಆದರೆ, ಅವರಿಗೆ ರಕ್ಷಣೆ ಇಲ್ಲ ಎನ್ನತಕ್ಕಂಥದ್ದು ಪ್ರಶ್ನೆಯಾಗಿದೆ.

ನಾಳೆ ಅವರು ಕಾರ್ಯನಿರ್ವಹಿಸುವುದು ಕಷ್ಟವಾಗುತ್ತದೆ. ಯಾವ ಅಧಿಕಾರಿಗಳ ಮೇಲೆ ಅವರು ನೇರವಾಗಿ ಆರೋಪವನ್ನು ಮಾಡುತ್ತಾರೆ, ಅವರನ್ನು ಸ್ಥಳಾಂತರ ಮಾಡಿಸಿ ಅಥವಾ ಅವರ ಮೇಲೆ ಕಾನೂನಿನ ಕ್ರಮ ತೆಗೆದುಕೊಳ್ಳಿ. ಕೊನೆಯದಾಗಿ ಒಂದು ವಾರದಲ್ಲಿಯಾದರೂ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನಾದರೂ ಮಾನ್ಯ ಮುಖ್ಯಮಂತ್ರಿಗಳು ಹೇಳಲಿ. ಏಕೆಂದರೆ ಸದನವನ್ನು ಮುಗಿಸಿ ಹೋಗಿ ಅವರು ಕೆಲಸವನ್ನು ಮಾಡುವುದು ಕಷ್ಟವಾಗುತ್ತದೆ.

ಅಧ್ಯಕ್ಷರು :- ವೆಲ್‌ನಲ್ಲಿ ನಿಂತು ಮಾತನಾಡುವುದು ಯಾವುದು ದಾಖಲೆಗೆ ಹೋಗುವುದಿಲ್ಲ. ವೆಲ್‌ನಲ್ಲಿ ನಿಂತು ಮಾತನಾಡುವುದಕ್ಕೆ ಹೋಗಬೇಡಿ. ಏನಾದರೂ ಮಾತನಾಡುವುದು ಇದ್ದರೆ ನಿಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ. ಮಾನ್ಯ ಹುಕ್ಕೇರಿಯವರೆ ಏನೋ ಮಾತನಾಡುತ್ತಿದ್ದೀರಿ.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ನಮ್ಮ ಪರಿಸ್ಥಿತಿ ಕೂಡ ಜಿಲ್ಲೆಯಲ್ಲಿ ಅದೇ ಆಗಿದೆ.

ಅಧ್ಯಕ್ಷರು :- ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

ಡಾ॥ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) : - ಮಾನ್ಯ ಅಧ್ಯಕ್ಷರೆ, ಎರಡು ಕಡೆ ಈ ಘಟನೆಗಳು ಆದ ಕೂಡಲೇ ಇಬ್ಬರು ಮಾನ್ಯ ಸಂಗಮೇಶ್ವರ್ ಮತ್ತು ಅಪ್ಪಾಜಿಯವರು complaint ಗಳನ್ನು ಕೊಟ್ಟಿದ್ದಾರೆ. ಆ complaint ಕೊಟ್ಟ ತಕ್ಷಣ ಒಬ್ಬರನ್ನು ಬಂಧನ ಮಾಡಿದ್ದೇವೆ ಇನ್ನುಳಿದ 9 ಜನ anticipatory bail ತೆಗೆದುಕೊಂಡಿದ್ದಾರೆ. ಇವರು ಯಾರ ಮೇಲೆ complaint ಕೊಟ್ಟಿದ್ದಾರೆ ಅವರು anticipatory bail ತೆಗೆದುಕೊಂಡಿದ್ದಾರೆ. ನಾವು ಕ್ರಮ ಜರುಗಿಸುತ್ತೇವೆ. ಶಾಸಕರು ಲಿಖಿತ ಮೂಲಕ ನನಗೆ ಪತ್ರವನ್ನು ಕೊಟ್ಟು ಇದು COD ತನಿಖೆಯಾಗಬೇಕೆಂದು ಕೇಳಿಕೊಂಡಿದ್ದಾರೆ. ಅದರ ಆಧಾರದ ಮೇಲೆ ಅವರು ಎದ್ದು ನಿಂತು ಚರ್ಚೆ ಮಾಡುವುದಕ್ಕೆ ಮುಂಚೆ ನಾನು ಎದ್ದುನಿಂತುಕೊಂಡು COD ತನಿಖೆ ಮಾಡುತ್ತೇನೆಂದು ಹೇಳಿದ್ದೇನೆ. ಒಂದು ಸಲ COD ತನಿಖೆ ಮಾಡಿದಾಗ ಯಾರ್ಯಾರು ಇದಕ್ಕೆ ಸಂಬಂಧಪಟ್ಟವರು ಇದ್ದಾರೆ ನಿಷ್ಪಕ್ಷಪಾತವಾಗಿ ತನಿಖೆಯಾಗುತ್ತದೆ ತಾನೇ? ನೀವೇ COD ತನಿಖೆಯಾಗಬೇಕೆಂದು ಹೇಳಿದ ಮೇಲೆ ಈ ಘಟನೆ ಬಗ್ಗೆ ತಾನೆ COD ತನಿಖೆಯಾಗಬೇಕಾಗಿರುವುದು. ಇದರಲ್ಲಿ ಯಾರ್ಯಾರ involvement ಇದೆ ಬಂಧನ ಮಾಡುವುದು ಸರಿ ಇದೆಯೋ ಇಲ್ಲವೋ, ಅವರ complaint ಸರಿ ಇದೆಯೋ ಇಲ್ಲವೋ ಇವರ complaint ಸರಿ ಇದೆಯೋ ಇಲ್ಲವೋ ಏನು ಘಟನೆಗಳು ಆಗಿದೆ. ಅಲ್ಲಿರುವ ನಮ್ಮ ಅಧಿಕಾರಿಗಳ ಬಗ್ಗೆ ನಿಮಗೆ ವಿಶ್ವಾಸ ಇಲ್ಲದಿರುವುದರಿಂದ ನಾನು COD ತನಿಖೆಗೆ ಆದೇಶ ಮಾಡಿದ್ದೇನೆ. ಆದ್ದರಿಂದ ನಾನು ಹೇಳುವುದು ಶಾಸಕರಾದ ನಮಗೆ ವಿಶ್ವಾಸವಿಲ್ಲದಿದ್ದರೆ ಇದಕ್ಕೆ ಕೊನೆ ಯಾವಾಗ. ಇದು ಧರಣಿ ಮಾಡುವ ವಿಷಯವೆ? ವೆಲ್‌ಗೆ ಬರುವ ವಿಷಯವೆ? ನೀವು ಬರೆದುಕೊಟ್ಟ ತಕ್ಷಣ ಸರ್ಕಾರ ಯಾವುದಕ್ಕೂ ಮಣಿಯದೆ ಸ್ಪಂಧನ ಮಾಡಿದೆ. ಒಂದು ನಿಮಿಷ ಕೇಳಿ. ಯಾವುದೇ ಕಾರಣಕ್ಕೆ COD ತನಿಖೆಯ ವರದಿ ಬರುವುದಕ್ಕೆ ಮುಂಚೆ ಯಾರನ್ನು suspend ಮಾಡುವುದಿಲ್ಲ, ಯಾವ ಪೊಲೀಸ್‌ರ ಮೇಲೆ ಕ್ರಮ ತೆಗೆದುಕೊಳುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ಒಂದು ನಿಮಿಷ ತಾವು complete ಮಾಡುವುದಕ್ಕೆ ಮುಂಚೆ..

ಡಾ॥ ಬಿ.ಎಸ್. ಯಡಿಯೂರಪ್ಪ :- ನೀವು ಈ ರೀತಿಯಾದ ಒತ್ತಡ ಮಾಡಿದರೆ ಹೇಗೆ? ನೀವು ಸರ್ಕಾರವನ್ನು ನಡೆಸಿದವರು ಇದ್ದೀರಿ.

ಅಧ್ಯಕ್ಷರು :- ನೀವು ಈ ರೀತಿ ವೆಲ್‌ನಲ್ಲಿ ನಿಂತು ಮಾತನಾಡಬೇಡಿ. ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡಲಿ.

ಡಾ॥ ಬಿ.ಎಸ್.ಯಡಿಯೂರಪ್ಪ :- ನಾನು conclude ಮಾಡಿ ಬಿಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಒಂದು ನಿಮಿಷ ತಾವು conclude ಮಾಡುವುದಕ್ಕೆ ಮುಂಚೆ, ನೀವು COD ಗೆ refer ಮಾಡಿದಿರಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. COD ಯಿಂದ ಅಧಿಕಾರಿಗಳ ಕರ್ತವ್ಯ ಲೋಪದ ಬಗ್ಗೆ ವರದಿಯನ್ನು ತರಿಸಿಕೊಂಡು ಒಂದು ವಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವಂಥ ಮಾತನ್ನಾದರೂ ಹೇಳಿ. ಅವರಿಗೆ ಆ ತರಹ ನಿರ್ದೇಶನ ಕೊಡಿ. ಏನು ಮಾಡದಿದ್ದರೆ ಅವರು ಕೆಲಸವನ್ನು ನಿರ್ವಹಿಸುವುದು ಕಷ್ಟವಾಗುತ್ತದೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ :- ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳು COD ತನಿಖೆಗೆ ಆರ್ಡರ್ ಮಾಡಿದಿರಿ ಬಹಳ ಸಂತೋಷ. ಅವರು COD ತನಿಖೆ ಬೇಡಿದರು, ನೀವು ಮಾಡಿದಿರಿ. ಆ ಆಫೀಸರ್ ಅಲ್ಲಿದ್ದರೆ pressure ಆಗುತ್ತದೆ. ನ್ಯಾಯವನ್ನು ಒದಗಿಸಿ ಕೊಡುವುದಕ್ಕಾಗುವುದಿಲ್ಲ. ತಾವು ಕೊನೆಯದಾಗಿ ಹೇಳಿದ್ದೀರಿ ನಾನು suspend ಮಾಡುವುದಿಲ್ಲವೆಂದು at least ಅವರನ್ನು transfer ಆದರೂ ಮಾಡಿ. ಅವನು ಅಲ್ಲಿದ್ದರೆ ನ್ಯಾಯವನ್ನು ಒದಿಗಿಸಿ ಕೊಡುವುದಕ್ಕಾಗುವುದಿಲ್ಲ.

ಡಾ॥ ಬಿ.ಎಸ್.ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು) :- ತಮಗೆ ಸಮಾಧಾನವಾಗುವುದಿದ್ದರೆ ಅವರನ್ನು transfer ಮಾಡುತ್ತೇನೆ.

(ಸದನದ ಬಾವಿಯಿಂದ ಎಲ್ಲಾ ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಕ್ಕೆ ಹೋದರು)

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) :- ಮಾನ್ಯ ಅಧ್ಯಕ್ಷರೆ, ನಾನು ಎರಡು ನಿಮಿಷದಲ್ಲಿ ನನ್ನ ಭಾವನೆಗಳನ್ನು ಹೇಳಿ ಬಿಡುತ್ತೇನೆ. ಯಾರೆ ವಿಧಾನಸಭೆಯ ಶಾಸಕರು ಬಂದು ದೂರು ಕೊಟ್ಟಾಗ ನೀವು ಸರ್ಕಾರಿ ಅಧಿಕಾರಿಗಳನ್ನು ಸದನದಲ್ಲಿ transfer ಮಾಡುತ್ತೇನೆಂದು ಹೇಳುವುದು ಒಳ್ಳೆಯ ಸಂಪ್ರದಾಯವಲ್ಲ. ಸರಿಯೋ ತಪ್ಪೋ ಎನ್ನುವುದನ್ನು ಅದರ ಬಗ್ಗೆ ಸಮೀಕ್ಷೆ ಮಾಡದೇ ಏಕಾ ಏಕಿ ಮಾನ್ಯ ಮುಖ್ಯಮಂತ್ರಿಗಳು ಆ ಅಧಿಕಾರಿಯನ್ನು transfer ಮಾಡುತ್ತೇನೆಂದು ಸದನದಲ್ಲಿ ಹೇಳಿದರೆ ಈ ರಾಜ್ಯದಲ್ಲಿ ಅಧಿಕಾರಿಗಳು ಹೇಗೆ ಕೆಲಸ ಮಾಡುವುದಕ್ಕೆ ಸಾಧ್ಯವಿದೆ? ಇವರಿಗೆ ಹಿಡಿತ ಇದೆಯೇ ಎನ್ನತಕ್ಕಂಥ ಮಾತನ್ನು ನಾನು ದಯಮಾಡಿ ಕೇಳುತ್ತೇನೆ. ಇದು ಸಾಧುವಾದುದು ಅಲ್ಲ.

(ಗೊಂದಲ)

ನಾನು ನಾಳೆ ತೆಗೆದುಕೊಂಡು ಬರುತ್ತೇನೆ. ನಮ್ಮ ಜಿಲ್ಲೆಯಲ್ಲಿ SP ಮತ್ತು DC ಯವರು ಇರಬಾರದು ಎಂದು ಮಾನ್ಯ ಯಡಿಯೂರಪ್ಪನವರಿಗೆ ಹೇಳಿದರೆ ಅವರನ್ನು ವರ್ಗಾವಣೆ ಮಾಡುತ್ತಾರಾ? ಇದು ಒಳ್ಳೆಯ ಸಂಪ್ರದಾಯವಲ್ಲ.

ಒಬ್ಬ ಮಾನ್ಯ ಸದಸ್ಯರು :- ಮಾನ್ಯ ಪುಟ್ಟೇಗೌಡರಿಗೆ ಅಧಿಕಾರಿಗಳ ಮೇಲೆ ಬಹಳ ಪ್ರೀತಿ.

ಶ್ರೀ ಸಿ.ಎಸ್. ಪುಟ್ಟೇಗೌಡ :- ಅವರು ಮಾನ್ಯ ಮುಖ್ಯಮಂತ್ರಿಗಳ ಚೇಂಬರಿಗೆ ಹೋಗಿ ಹೇಳಬೇಕು ವರ್ಗಾವಣೆ ಮಾಡುವುದು ಬಿಡುವುದು ಅವರಿಗೆ ಸೇರಿದ್ದು. Assembly ಒಳಗಡೆ ಒತ್ತಾಯ ತಂದಾಗ ವರ್ಗಾವಣೆ ಮಾಡುತ್ತೇನೆಂದು ಹೇಳಿದರೆ ಹೇಗೆ? ನಾನು ಒಬ್ಬ ಶಾಸಕ, SI ಆದರೂ ಒಬ್ಬ ಅಧಿಕಾರಿ Chief Secretary ಆದರೂ ಒಬ್ಬ ಅಧಿಕಾರಿ. ನಾಳೆ Chief Secretary ಯನ್ನು ತೆಗೆಯಬೇಕೆಂದು ನಾನು ನಮ್ಮ ಜನರನ್ನು ಕಟ್ಟಿಕೊಂಡು ಬಾವಿಗೆ ಬರುತ್ತೇನೆ, ಆಗ ಮಾನ್ಯ ಮುಖ್ಯಮಂತ್ರಿಗಳು ಅವರನ್ನು ತೆಗೆಯುತ್ತಾರಾ ಎಂದು ನಾನು ಪ್ರಶ್ನೆಯನ್ನು ಮಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು :- ತಪ್ಪು ಮಾಡಿದರೆ ತೆಗೆದೇ ತೆಗೆಯುತ್ತಾರೆ.

ಶ್ರೀ ಸಿ.ಎಸ್.ಪುಟ್ಟೇಗೌಡ :- ಇದು ಎಲ್ಲಿಯೂ ಇಲ್ಲದಿರುವ ಉಲ್ಟಾ ಸಂಪ್ರದಾಯ. ನೀವು ಬೇಕಾದರೆ ನಿಮ್ಮ ಚೇಂಬರಿನಲ್ಲಿ ಕರೆದು ಯಾವ ಅಧಿಕಾರಿಯನ್ನು

ತಗೆಯಿರಿ ಅಥವಾ ಬಿಡಿ. ನಾಳೆ ನಾನು ನಮ್ಮ ಶಾಸಕರನ್ನು ಕಟ್ಟಿಕೊಂಡು ಈ ರಾಜ್ಯದ Chief Secretary ಯವರು ನನಗೆ ಅನ್ಯಾಯವನ್ನು ಎಸಗಿದ್ದಾರೆ ಅವರನ್ನು ತೆಗೆಯಬೇಕೆಂದು ಹೇಳಿದರೆ ನೀವು ತೆಗೆಯುತ್ತೀರಾ? ದಯವಾಡಿ ನೀವು ಯೋಚನೆಯನ್ನು ಮಾಡಿ. ಸದನದಲ್ಲಿ ಈ ಪರಿಪಾಠ ನಡೆದರೆ ಯಾವ ಅಧಿಕಾರಿ ನಿಮ್ಮ ಹತ್ತಿರ ಕೆಲಸ ಮಾಡುವುದಕ್ಕೆ ಬರುತ್ತಾನೆ.

ಶ್ರೀ ಬಿ.ಕೆ. ಸಂಗಮೇಶ್ವರ :- ಪಾಪ ಪುಟ್ಟೇಗೌಡರಿಗೆ ಯಾರಾದರೂ ಕೊಲೆ ಮಾಡುವುದಕ್ಕೆ ಹೋಗಿದ್ದರೆ ಗೊತ್ತಾಗುತ್ತಿತ್ತು, ಯಾರು ಹೋಗಿಲ್ಲ. ಅದಕ್ಕಾಗಿ ಅವರಿಗೆ ಅಧಿಕಾರಿಗಳ ಮೇಲೆ ಬಹಳ ಪ್ರೀತಿ.

ಶ್ರೀ ಎ. ಸೋಮಣ್ಣ (ಗೋವಿಂದರಾಜ ನಗರ) :- ಮಾನ್ಯ ಅಧ್ಯಕ್ಷರೆ, ಇದು ಏನು ಮೊದಲನೆಯದ್ದು ಅಲ್ಲ. ಇಲ್ಲಿ ಏನಾಗಿದೆ ಎಂದರೆ, ಒಬ್ಬ ಶಾಸಕರು ತಾವು ಒಂದು ಜಾತ್ರೆಗೆ ಹೋದಾಗ ಏನಾಯಿತು ಎನ್ನುವುದರ ಬಗ್ಗೆ ವಿವರವಾಗಿ ಹೇಳಿದ್ದಾರೆ. COD ಗೆ ಕೇಳಿರುವುದರಿಂದ ಅದನ್ನು COD ಗೆ ಕೊಟ್ಟಿದ್ದಾರೆ. ಮಾನ್ಯ ಪುಟ್ಟೇಗೌಡರು ಅರ್ಥ ಮಾಡಿಕೊಳ್ಳಬೇಕು. ಈ ಸದನದಲ್ಲಿ ಇಂತಹ ಸಾಕಷ್ಟು ಪ್ರಕಿಯೆಗಳು ಮೊದಲಿನಿಂದ ನಡೆದುಕೊಂಡು ಬಂದಿದೆ. ಒಬ್ಬ ಅಧಿಕಾರಿಯನ್ನು COD ಗೆ ಕೊಟ್ಟಂಥ ಸಂದರ್ಭದಲ್ಲಿ ಹಸ್ತಕ್ಷೇಪವಾಗಬಾರದು ಎನ್ನುವ ದೃಷ್ಟಿಯಿಂದ ಬೇರೆ ಕಡೆ ಅವರನ್ನು ಹಾಕುವುದು ಅದು ಏನು punishment ಅಲ್ಲ. ಆದರೆ ಒಂದನ್ನು ಮಾನ್ಯ ಪುಟ್ಟೇಗೌಡರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಎಲ್ಲೋ ಒಂದು ಕಡೆ ಒಬ್ಬ ಶಾಸಕರನ್ನು ತೇಜೋವಧೆ ಮಾಡುವಾಗ ಅವನಿಗೆ ಕಳಂಕವಾಗುವ ರೀತಿಯಲ್ಲಿ ನಡೆದುಕೊಳ್ಳುವಾಗ COD ತನಿಖೆ ಹೇಗೆ ಮಾಡುವುದಕ್ಕಾಗುತ್ತದೆ. ಒಂದು ಇಸ್ಯೂವನ್ನು COD ಗೆ ಕೊಟ್ಟಾಗ ಅದೇ ಅಧಿಕಾರಿಯ ಕೈಯಲ್ಲಿ ಆ COD ಯ report ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ಇದು ಕೇವಲ ಕಾಂಗ್ರೆಸ್, ಬಿಜೆಪಿ, ಜನತಾದಳ ಪಕ್ಷದ್ದು ಅಲ್ಲ. ಇದನ್ನು ಮಾಡಿರುವುದು ಶಿಸ್ತುಬದ್ಧವಾದ ಒಂದು ಕಾರ್ಯಕ್ರಮ. ಮಾನ್ಯ ಮುಖ್ಯಮಂತ್ರಿಗಳು ಮಾಡಿರುವ ಈ ಒಂದು ಕಾರ್ಯಕ್ರಮವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು :- ಮಾನ್ಯ ಪುಟ್ಟೇಗೌಡರು ಆಯಿತು. ನೀವು ನಿಮ್ಮ ಭಾವನೆಗಳನ್ನು ಹೇಳಿಕೊಂಡಿರುತ್ತೀರಿ.

ಶ್ರೀ ಸಿ.ಎಸ್.ಪುಟ್ಟೇಗೌಡ :- ಇದು ಒಂದು ಒಳ್ಳೆಯ ಸಂಪ್ರದಾಯವಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಮುಖ್ಯಮಂತ್ರಿಗಳು ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಅವರು ಏನು suspend ಮಾಡಿರುವುದಿಲ್ಲ. .ಏಕೆಂದರೆ ಅವರದ್ದು ನನ್ನ ಪಕ್ಕದ constituency.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ನಮ್ಮ ಆಳಂದ ಶಾಸಕರ ಮೇಲೆ ಕೆಲವು ಪೊಲೀಸ್ ದೌರ್ಜನ್ಯ ಮತ್ತು ಕೆಲವು ಅಧಿಕಾರಿಗಳು ದೌರ್ಜನ್ಯವನ್ನು ಎಸಗಿದ್ದಾರೆ. ಆದ್ದರಿಂದ ಈಗ ಅವರನ್ನು suspend ಮಾಡಿ ಸ್ವಾಮಿ. ಇವರನ್ನು ವರ್ಗಾವಣೆ ಮಾಡುತ್ತೇವೆನ್ನುವುದಾದರೆ ನಾವು ಬಾವಿಗೆ ಬಂದು ಅಲ್ಲಿ ಕುಳಿತುಕೊಳ್ಳುತ್ತೇವೆ. ಈಗ ತಾವು ಅವರಿಗೆ ಹೇಳಿದಿರಿ. ಅವರು ಬಾವಿಗೆ ಬಂದು ಕುಳಿತುಕೊಂಡ ತಕ್ಷಣ ಸನ್ಮಾನ್ಯ ಮುಖ್ಯಮಂತ್ರಿಗಳು ಅವರನ್ನು ವರ್ಗಾವಣೆ ಮಾಡುವುದಕ್ಕೆ ಒಪ್ಪಿದ್ದಾರೆ ಅದಕ್ಕೆ ನಮ್ಮ ಅಭ್ಯಂತರವೇನಿಲ್ಲ. ನಮ್ಮ ಆಳಂದ ಶಾಸಕರಿಗೆ ಅಧಿಕಾರಿಗಳಿಂದ ಕಿರುಕುಳವಾಗಿದೆ. ಆ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿರುತ್ತೀರಿ? ಇಲ್ಲವೆಂದರೆ ನಾವು ಬಂದು ಧರಣಿ ಕೂಡುವುದಕ್ಕೆ ರೆಡಿ ಇದ್ದೇವೆ.

ಅಧ್ಯಕ್ಷರು :- ನಾನು ಎಲ್ಲಾ ಸದಸ್ಯರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಸಾರ್ವಜನಿಕ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಈ ಸದನ ಇರುವುದು. ಶಾಸಕರು ಅವರ ಬಗ್ಗೆ ಏನು ತೊಂದರೆಯಾಗಿದೆ ಆ ಬಗ್ಗೆ ಅವರು ಪ್ರಸ್ತಾಪವನ್ನು ಮಾಡಲಿ ಆದರೆ ಅದನ್ನೆ ನಾವು ಅಂತಿಮವಾಗಿ ಇಲ್ಲಿ ತೆಗೆದುಕೊಂಡು ಹೋಗುವುದಲ್ಲ. ಸದನದಲ್ಲಿ ಸಾರ್ವಜನಿಕ ಮಹತ್ವದ ವಿಷಯಗಳು ಸಾಕಷ್ಟು ಇವೆ. ಆ ಬಗ್ಗೆ ಚರ್ಚೆ ಮಾಡೋಣ. ನೀವು ಪರಸ್ಪರ ಈ ರೀತಿಯಾಗಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು :- ಇಲ್ಲಿ ಯಾವ ಅಧಿಕಾರಿಯನ್ನು suspend ಮಾಡಬೇಕು, ಯಾವ ಅಧಿಕಾರಿಯನ್ನು ವರ್ಗಾವಣೆ ಮಾಡಬೇಕು ಇದನ್ನೆ ಚರ್ಚೆ ಮಾಡೋಣವೇ? ಸದನದಲ್ಲಿ ಯಾವ ಅಧಿಕಾರಿಯನ್ನು suspend ಮಾಡಬೇಕು ಯಾವ ಅಧಿಕಾರಿಯನ್ನು ವರ್ಗಾವಣೆ ಮಾಡಬೇಕು, ಇದನ್ನೆ ಬೆಳಗಿನಿಂದ ಸಾಯಂಕಾಲದವರೆ ಇದನ್ನೆ ಚರ್ಚೆಮಾಡುವುದೇ? ತಾವು Public Issue ಅನ್ನು ತೆಗೆದುಕೊಳ್ಳಿ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ (ಸದಲಗ) :- ಮಾನ್ಯ ಅಧ್ಯಕ್ಷರೆ, ನಾನು suspend ಮಾಡುವುದರ ಬಗ್ಗೆ ಮಾತನಾಡುವುದಿಲ್ಲ. ನಾನು ಈ ಸದನದ ಮೂಲಕ ನಮ್ಮ ಶಾಸಕರಿಗೆ ಏನು ತೊಂದರೆಯಾಗಿದೆ ಅದನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದು ನಮ್ಮ ಕರ್ತವ್ಯವಾಗಿದೆ. ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ, ನಮ್ಮ ಆಪ್ತ ಕಾರ್ಯದರ್ಶಿಗಳ ಮೂಲಕ ಅಧಿಕಾರಿಗಳ ಹತ್ತಿರ ಪತ್ರವನ್ನು ನಾವು ಕಳುಹಿಸಿಕೊಟ್ಟರೆ ಆ ಅಧಿಕಾರಿಗಳು ಕೇಳುತ್ತಾರೆ ಅವರ ಪತ್ರವನ್ನು ಏತಕ್ಕಾಗಿ ಕಳುಹಿಸಿದ್ದೀರಿ, ಆ ಎಂಎಲ್ಎಯನ್ನೆ ಬರುವುದಕ್ಕೆ ಹೇಳಿ ಎಂದು ಹೇಳುತ್ತಾರೆ. ಇದೇ ರೀತಿಯ ಪದ್ಧತಿಯೂ ನಮ್ಮ ಜಿಲ್ಲೆಯಲ್ಲಿ ನಡೆದಿದೆ. ಯಾವುದೇ ಒಂದು ಅಭಿವೃದ್ಧಿ ಕಾರ್ಯವನ್ನು ತೆಗೆದುಕೊಂಡು ಹೋದರೆ, ಅಲ್ಲಿ ಬಿಜೆಪಿ ಪಕ್ಷದ ಸದಸ್ಯರೆ ಈ ಕೆಲಸವನ್ನು ಮಾಡಿ ಎಂದು ಹೇಳಬೇಕಂತೆ. ನಾವು ಶಾಸಕರು ಏತಕ್ಕಾಗಿ ಇರಬೇಕು? ಆ ವಿಷಯವನ್ನು ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು :- ಮಾನ್ಯ ಗುತ್ತೇದಾರ್‌ರವರೆ, ತಾವು ಮಾತನಾಡಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ನಾನು ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಡಬೇಕು. ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದು ನಾನು ಹೇಳಬೇಕಾಗಿದೆ. ಅಲ್ಲಿಯ ನ್ಯಾಯಬೆಲೆ ಅಂಗಡಿಯಲ್ಲಿ ಹೊರಗಡೆ ಮಾರಾಟ ಮಾಡಿರುವ ಬಗ್ಗೆ ಪೊಲೀಸ್‌ಗೆ ಕಂಪ್ಲೆ೦ಟ್‌ನ್ನು ಕೊಟ್ಟರೆ ಯಾರು ಮಾರಾಟ ಮಾಡಿದ್ದಾನೆ ಅವನ ಮೇಲೆ ಏನು ಮಾಡುವುದಿಲ್ಲ. ಯಾರು ಕಂಪ್ಲೆ೦ಟ್‌ನ್ನು ಕೊಟ್ಟಿದ್ದಾರೆ ಅವನನ್ನು ಹಿಡಿದು ಒಳಗೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಸುಧಾಷ್ ಗುತ್ತೇದಾರ್ :- ಮಾನ್ಯ ಅಧ್ಯಕ್ಷರೆ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು :- ಮಾನ್ಯ ಗುತ್ತೇದಾರ್‌ರವರೆ ತಾವು ಮಾತನಾಡುವುದಿಲ್ಲವೇ? ನಿಮಗೆ ಮಾತನಾಡುವುದಕ್ಕೆ ನಾನು ಸಮಯವನ್ನು ಕೊಟ್ಟಿದ್ದೇನೆ. ತಾವು ಮಾತನಾಡಿ ಎಂದು ಹೇಳಿದರೂ ಕೂಡ ತಾವು ಮಾತನಾಡುತ್ತಿಲ್ಲ.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ನಾನು ನಮ್ಮ ಪರಿಸ್ಥಿತಿಯ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿಯ ಪರಿಸ್ಥಿತಿ ಏನಾಗಿದೆ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು :- ಮಾನ್ಯ ಗುತ್ತೇದಾರ್‌ರವರೆ ತಾವು ಮಾತನಾಡಿ.

ಶ್ರೀ ಸುಭಾಷ್ ಗುತ್ತೇದಾರ್ :- ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಶಾಸಕರ ರಕ್ಷಣೆಯ ಬಗ್ಗೆ ವಿಷಯವು ಪ್ರಸ್ತಾಪವಾಗಿದೆ. ಆ ವಿಷಯವಾಗಿ ನನಗೂ ಕೂಡ 7-8 ತಿಂಗಳುಗಳ ಹಿಂದೆ ಕೊಲೆ ಬೆದರಿಕೆ ಬಂದಿದೆ. ನಾನು ಗುಲ್ಬರ್ಗಾ ಎಸ್.ಪಿ. ಮತ್ತು ಡಿ.ಐ.ಜಿ. ಅವರ ಹತ್ತಿರ ಅರ್ಜಿಯನ್ನು ಕೊಟ್ಟು ನನಗೆ ಗನ್ ಮ್ಯಾನ್ ಕೊಡಬೇಕೆಂದು ಹೇಳಿದ್ದೇನೆ. ಆದರೂ ಕೂಡ ಅವರು ಬೆಂಗಳೂರು ಲೆವೆಲ್ ಕಮೀಷನರ್‌ರವರ ಹತ್ತಿರ ಒಂದು ಬಾಡಿ ಇರುತ್ತದೆ, ಒಂದು ಕಮಿಟಿ ಇರುತ್ತದೆ. ಆ ಕಮಿಟಿಗೆ ಅರ್ಜಿಯನ್ನು ಕೊಡಿ ಎಂದು ಹೇಳಿದರು. ಅಲ್ಲಿಯೂ ಸಹ ನಾನು ಅರ್ಜಿಯನ್ನು ಕೊಟ್ಟೆ. ಈ ತರಹ ನನಗೆ ಕೊಲೆ ಬೆದರಿಕೆ ಇದೆ ನನಗೆ ಗನ್ ಮ್ಯಾನ್ ಬೇಕೆಂದು ತಮಗೂ ಕೂಡ ನಾನು ಅರ್ಜಿಯನ್ನು ಕೊಟ್ಟಿದ್ದೇನೆ. ನಾನು ಅರ್ಜಿ ಕೊಟ್ಟು 7-8 ತಿಂಗಳಾದರೂ ಕೂಡ ನನಗೆ ಗನ್‌ಮ್ಯಾನ್ ಕೊಟ್ಟಿರುವುದಿಲ್ಲ. ಇದಕ್ಕೆ ಯಾರು ಹೊಣೆ? ಸರ್ಕಾರ ಹೊಣೆಯೇ? ಪೊಲೀಸ್ ಇಲಾಖೆ ಹೊಣೆಯೇ? ಯಾರು ಹೊಣೆ. ಯಾರನ್ನು suspend ಮಾಡುತ್ತೀರಿ, ಯಾರಿಗೆ ಏನು ಮಾಡುತ್ತೀರಿ? ಈ ಸದನಕ್ಕೆ ನಾನು ತಮ್ಮ ಮುಖಾಂತರ ತಿಳಿಸುತ್ತಿದ್ದೇನೆ.

ಅಧ್ಯಕ್ಷರು :- ಮಾನ್ಯ ಸುರೇಶ್‌ಕುಮಾರ್‌ರವರೆ, ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಮಾನ್ಯ ಗುತ್ತೇದಾರ್‌ರವರ ಪತ್ರ ಬಂದಾಗ ಇದನ್ನು ನಾನು Home Ministerರವರಿಗೂ ಕಳುಹಿಸಿದ್ದೇನೆ. ಮಾನ್ಯ ಸದಸ್ಯರು ರಕ್ಷಣೆಯನ್ನು ಕೋರಿ ನನಗೂ ಕೂಡ ಅವರು ಪತ್ರವನ್ನು ಬರೆದಿದ್ದರು. ಅದನ್ನು ಮಾನ್ಯ ಗೃಹಸಚಿವರ ಗಮನಕ್ಕೂ ಕೂಡ ತಂದಿದ್ದೇನೆ. ಅದನ್ನು ಪರಿಶೀಲನೆ ಮಾಡಿಕೊಂಡು ಅವರಿಗೆ ರಕ್ಷಣೆಯನ್ನು ಕೊಡುವಂತಹ ಕೆಲಸವನ್ನು ಮಾಡಬೇಕು.

ಶ್ರೀ ಹೆಚ್.ಡಿ. ರೇವಣ್ಣ :- ಈಗ ಅವರು ಗುಲ್ಬರ್ಗಾ ಎಸ್‌ಪಿ ಮತ್ತು ಐಜಿಪಿಯವರಿಗೂ ಕೂಡ ಅರ್ಜಿಯನ್ನು ಕೊಟ್ಟಿದ್ದಾರೆ. ಅವರು ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಹಾಗಾದರೆ ಅವರನ್ನು ತಾವು ವರ್ಗಾವಣೆ ಮಾಡುತ್ತೀರಾ ಅಥವಾ suspend ಮಾಡುತ್ತೀರಾ?

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅವರಿಗೆ ಗನ್ ಮ್ಯಾನ್ ಕೊಡುವ ಬಗ್ಗೆ ಎಸ್‌ಪಿಯವರಿಗೆ ಅಧಿಕಾರ ಇದೆ.

ಶ್ರೀ ಹೆಚ್.ಡಿ. ರೇವಣ್ಣ :- ಹಾಗಾದರೆ ನೀವು ಗುಲ್ಬರ್ಗಾ ಎಸ್‌ಪಿಯವರನ್ನು ನೀವು ವರ್ಗಾವಣೆ ಮಾಡುತ್ತೀರಾ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಮಾನ್ಯ ಅಧ್ಯಕ್ಷರೆ,.....ಏನೇನು ಉದಾಹರಣೆಗಳು ಇವೆ ಅದನ್ನು ಹೇಳುತ್ತೇನೆ.

ಅಧ್ಯಕ್ಷರು :- ಮಾನ್ಯ ಹುಕ್ಕೇರಿಯವರೆ, ಅವರು ಮಾತನಾಡುವುದು ಮುಗಿಯಲಿ. ಅವರು ಮಾತನಾಡಿ ಮುಗಿಸಿದ ನಂತರ ತಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಗನ್ ಮ್ಯಾನ್ ಕೊಡತಕ್ಕಂತಹ ಜವಾಬ್ದಾರಿ ಎಸ್‌ಪಿಯವರಿಗೆ ಇದೆ. ಎಸ್‌ಪಿಯವರು ಬೇಕೆಂದೆ ಉದಾಸೀನ ಮಾಡುತ್ತಿದ್ದಾರೆ. ಸರ್ಕಾರದ ಗಮನಕ್ಕೂ ಕೂಡ ಹಾಗು ತಮ್ಮ ಗಮನಕ್ಕೂ ಕೂಡ ತಂದಿದ್ದೇವೆ. ನೀವು ಸಹ ನಮಗೆ ರಕ್ಷಣೆ ಕೊಡದೆ ಇದ್ದರೆ ನಾವು ಶಾಸಕರು ಹೇಗೆ ಕೆಲಸವನ್ನು ಮಾಡುವುದು?

ಶ್ರೀ ಸುಭಾಷ್ ಗುತ್ತೇದಾರ್ :- ರೇವುನಾಯಕ್ ಬೆಳಮಗಿ, ಮಂತ್ರಿಯವರು ಸಹ ಈ ಬಗ್ಗೆ ಹೇಳಿದ್ದಾರೆ. ನಾನು ಅವರಿಂದಲೂ ಈ ಬಗ್ಗೆ ಹೇಳಿಸಿದ್ದೇನೆ.

ಡಾ॥ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಗೃಹಸಚಿವರ ಹತ್ತಿರ ಹಾಗೂ ಪೊಲೀಸ್ ಇಲಾಖೆಯವರ ಹತ್ತಿರ ಮಾತನಾಡಿ, ಈ ಬಗ್ಗೆ ಮಾತನಾಡಿ ಕ್ರಮ ಜರುಗಿಸುತ್ತೇನೆ. ಖಂಡಿತವಾಗಿಯೂ ಯಾವುದನ್ನು ನಾನು ಹಗುರವಾಗಿ ತೆಗೆದುಕೊಳ್ಳಬಾರದು. ಒಬ್ಬ ಶಾಸಕರು ಎದ್ದು ನಿಂತುಕೊಂಡು ನನಗೆ ಪ್ರಾಣಭಯವಿದೆ, ನನಗೆ ತೊಂದರೆಯಾಗುತ್ತಿದೆ ನನಗೆ ರಕ್ಷಣೆಯನ್ನು ಕೊಡಿ ಎಂದು ಕೇಳಿದರೆ ಅದನ್ನು ಕೊಡುವುದಕ್ಕೆ ನಾವು ಸಿದ್ದರಿದ್ದೇವೆ. ನಾನು ಗೃಹಸಚಿವರ ಜೊತೆಯಲ್ಲಿ ಮಾತನಾಡಿ, ಇಲಾಖೆಯವರ ಜೊತೆಯಲ್ಲಿ ಮಾತನಾಡಿ ಅಲ್ಲಿಯ ವಾಸ್ತವ ಸ್ಥಿತಿಯನ್ನು ತಿಳಿದುಕೊಂಡು ಖಂಡಿತವಾಗಿಯೂ ಏನು ಬಂದೋಬಸ್ತು ಬೇಕು ಅದನ್ನು ಮಾಡೋಣ. ಆ ಕಡೆಗೆ ನಾನು ಗಮನವನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಅವರಿಗೆ ರಕ್ಷಣೆಯನ್ನು ಕೊಡುವುದರ ಬಗ್ಗೆ ಏನಾದರೂ ಕೊಡಬೇಕೇ? ಗನ್ ಮ್ಯಾನ್ ಕೊಡುತ್ತೀರಾ?

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅವರು ಹೇಳಿದ್ದಕ್ಕೆ ಕೊಡಬೇಡಿ. ಇವರು ಕೇಳಿದಕ್ಕೆ ಕೊಡಿ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಗಳ ಸಚಿವರು) :- ಮಾನ್ಯ ಅಧ್ಯಕ್ಷರೆ, ಒಂದು ಸಮಸ್ಯೆ ಏನೆಂದರೆ, ಅವರು ಬಂದು suspend ಮತ್ತು transfer ಬಗ್ಗೆ ಕೇಳಿದರು. ಇವರು transfer ಮಾಡುವುದು ಬೇಡವೆಂದು ಕೇಳುತ್ತಿದ್ದಾರೆ. ಈಗ ನಾವು ಗನ್ ಮ್ಯಾನ್ ಕೊಡುತ್ತೇವೆ ಎಂದರೆ, ಅವರು ಬೇಡ ಅಂದರೆ?

(ಗೊಂದಲ)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಇದನ್ನು ಕೇಳುವವರಿಗೆಲ್ಲಾ ಕೊಡುವುದಲ್ಲ. ಈ ಬಗ್ಗೆ ಸರ್ಕಾರದ ಪಾಲಿಸಿ ಇದೆ. There is a policy of the Government.

ಶ್ರೀ ಹೆಚ್.ಸಿ. ಬಾಲಕೃಷ್ಣ : ಇದು ತಮಾಷೆಯ ಪ್ರಶ್ನೆಯಲ್ಲ. ಸದನವು ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಇದು ಎಲ್ಲಾ ಶಾಸಕರಿಗೂ ಬೇಕಾಗಿದೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ವಿಶೇಷ ಪ್ರಕರಣ ಎಂದು ಇದನ್ನು ಪರಿಗಣಿಸಿ ಅವರಿಗೆ ಗನ್ ಮ್ಯಾನ್‌ನ್ನು ಕೊಡುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಯಾವ ಶಾಸಕರು ಗನ್ ಮ್ಯಾನ್ ಬೇಕೆಂದು ಇಷ್ಟಪಡುತ್ತಾರೆ ಎಲ್ಲಾ ಶಾಸಕರಿಗೂ ಗನ್ ಮ್ಯಾನ್ ಕೊಡಬೇಕು.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಸರ್ಕಾರದ ಪಾಲಿಸಿ ಏನಿದೆ ಅದನ್ನು ನಾವು ಕೇಳುತ್ತಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ನಮಗೂ ಕೂಡ ಉತ್ತರವನ್ನು ಕೊಡಬೇಕಲ್ಲ.

ಶ್ರೀ ಸುಧಾಷ್ ಗುತ್ತೇದಾರ್ :- ಸುಮಾರು 7-8 ತಿಂಗಳುಗಳಿಂದ ಅಧ್ಯಕ್ಷರು ಹೇಳಿದರೂ ಕೂಡ ಗನ್‌ಮ್ಯಾನ್‌ನ್ನು ಕೊಟ್ಟಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಯಾವ ಶಾಸಕರು ಇಷ್ಟಪಡುತ್ತಾರೆ ಅವರೆಲ್ಲ ರಿಗೂ ಗನ್ ಮ್ಯಾನ್ ಕೊಡಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಮುಖ್ಯಮಂತ್ರಿಗಳು ಇದನ್ನು ಯಾವಾಗಿನಿಂದ ಮಾಡುತ್ತಾರೆಂದು ಹೇಳಬೇಕು.

ಅಧ್ಯಕ್ಷರು :- ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತೇನೆಂದು ಹೇಳಿದ್ದಾರಲ್ಲಾ. ಅವರು ಹೇಳಿದ ಮೇಲೂ ಕೂಡ ಯಾವಾಗಿನಿಂದ ಕೊಡುತ್ತೀರೆಂದು ಹೇಳಿದರೆ ಹೇಗೆ?

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ ನಿಮಗೆ ಅರ್ಜಿಯನ್ನು ಕೊಟ್ಟು 7-8 ತಿಂಗಳುಗಳು ಆಗಿದೆ. ಮುಖ್ಯಮಂತ್ರಿಗಳು ಬೇಗ ಮಾಡಿಸುತ್ತೇನೆಂದು ಹೇಳಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಮಾನ್ಯ ಅಧ್ಯಕ್ಷರೆ, ನಾನು ಈ ಬಗ್ಗೆ ಅರ್ಜಿಯನ್ನು ಕೊಟ್ಟಿದ್ದೆ. ನಮಗೂ ಕೂಡ ಇದೇ ರೀತಿಯಾಗಿದೆ. ದಯಮಾಡಿ ತಾವು ಯಾವ ಶಾಸಕರು ಇಷ್ಟಪಡುತ್ತಾರೆ. ಅವರೆಲ್ಲರಿಗೂ ಗನ್ ಮ್ಯಾನ್‌ನ್ನು ಕೊಡಬೇಕು.

ಅಧ್ಯಕ್ಷರು :- ಎಲ್ಲರೂ ಸಹ ಗನ್ ಮ್ಯಾನ್‌ನ್ನು ತೆಗೆದುಕೊಂಡು ಬಿಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ತಾವು ಮುಖ್ಯಮಂತ್ರಿಗಳ ಕೈಯಲ್ಲಿ ಹೇಳಿಸಬೇಕು.

ಅಧ್ಯಕ್ಷರು :- ಅಯಿತು. ಎಲ್ಲರಿಗೂ ಗನ್ ಮ್ಯಾನ್ ಕೊಡಿಸುವಂತಹ ವ್ಯವಸ್ಥೆ ಮಾಡೋಣ. ಮಾನ್ಯ ಜಯಚಂದ್ರರವರೆ ಎಲ್ಲರಿಗೂ ಗನ್ ಮ್ಯಾನ್ ಕೊಡಿಸೋಣ.

ಶ್ರೀ ಕೆ.ಎಂ.ಶಿವಲಿಂಗೇಗೌಡ :- ಏನು ಮಾಡುವುದಕ್ಕಾಗುತ್ತದೆ, ಪರಿಸ್ಥಿತಿ ಆ ರೀತಿಯಾಗಿದೆ. ಈ ಬಗ್ಗೆ ಆರ್ಡರ್ ಮಾಡಿಸಬೇಕು.

ಅಧ್ಯಕ್ಷರು :- ಮಾನ್ಯ ಹುಕ್ಕೇರಿಯವರೆ, ತಾವು ಮಾತನಾಡಿ. ಮಾನ್ಯ ಶಿವಲಿಂಗೇಗೌಡರೆ ತಾವು ಕುಳಿತುಕೊಳ್ಳಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ನ್ಯಾಯಬೆಲೆಯ ಅಂಗಡಿಯ ಅಂಗಡಿಗಾರ ಡಿಸೆಂಬರ್ ತಿಂಗಳಲ್ಲಿ ಹಂಚಲಿಲ್ಲ. ಅವನು ಪಡಿತರವನ್ನು ಹೊರಗಡೆಯಲ್ಲಿ ಮಾರಾಟ ಮಾಡಿದ್ದಾನೆ. ಆನಂತರ ಜನವರಿ ತಿಂಗಳಲ್ಲಿ ಡಿಸೆಂಬರ್ ತಿಂಗಳಿನದನ್ನು ಖಾಸಗಿ ಅಂಗಡಿಯಲ್ಲಿ ಖರೀದಿ ಮಾಡಿ ಡಿಸೆಂಬರ್ ಹಾಗೂ ಜನವರಿ ತಿಂಗಳಿನ ಕೋಟಾವನ್ನು ಆ ಗ್ರಾಮಕ್ಕೆ ತೆಗೆದುಕೊಂಡು ಹೋಗುತ್ತಿದ್ದ. ಆಗ ಗ್ರಾಮಪಂಚಾಯಿತಿಯ ಅಧ್ಯಕ್ಷರು ಮತ್ತು ಗ್ರಾಮಸ್ಥರು ಕೂಡಿ ಆ ಅಂಗಡಿಗಾರನನ್ನು ಹಿಡಿದು ಅವನ ಮೇಲೆ ಕೇಸನ್ನು ಹಾಕಿದರೆ ಪೊಲೀಸ್‌ನವರು ಅಂಗಡಿಗಾರನನ್ನು ಹಿಡಿಯುವುದಕ್ಕೆ ತಯಾರಿಲ್ಲ. ಯಾರು ದೂರನ್ನು ಕೊಟ್ಟಿದ್ದಾರೆ ಅವನನ್ನು ಅರೆಸ್ಟ್ ಮಾಡುವುದಕ್ಕೆ ಹೊರಟಿದ್ದಾರೆ. ಅವನನ್ನು ಅರೆಸ್ಟ್ ಮಾಡುವ ಬಗ್ಗೆ ಪೊಲೀಸ್‌ನವರು ತಿರುಗಾಡುತ್ತಿದ್ದಾರೆ. ಇದು ಎಂತಹ ನ್ಯಾಯವೆಂದು ನನಗೆ ಗೊತ್ತಾಗುತ್ತಿಲ್ಲ. ನಮ್ಮಲ್ಲಿ ಏನಾಗಿದೆ ಎಂದರೆ, ನಾವು ಏನು 7 ಜನರು ಆಯ್ಕೆಯಾಗಿದ್ದೇವಲ್ಲಾ, ಸೋತ ಬಿಜೆಪಿ ಎಂಎಲ್‌ಎಗಳ ಕೆಲಸಗಳು ಆಗಬೇಕು. ಗೆದ್ದ ಎಂಎಲ್‌ಎಗಳು ಯಾರು ಕೂಡ ಹೋಗುವ ಹಾಗಿಲ್ಲ. ಅಲ್ಲಿ ಅವರದೇ ನಡೆಯುವುದು, ನಮ್ಮದು ಏನು ನಡೆಯುವುದಿಲ್ಲ. ಇದನ್ನು ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದೇವೆ. ಯಾರು ಚುನಾವಣೆಯಲ್ಲಿ ಗೆದ್ದಿದ್ದಾರೆ. ಅವರಿಗೆ ಕೆಲಸ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಈ ಬಗ್ಗೆ ತಾವು ಅದೇಶವನ್ನು ಮಾಡಿಸಿ. ಅವರೇ ಹೇಳಬೇಕು, ಅವರೇ ಕೆಲಸವನ್ನು ಮಾಡಿಸಬೇಕು, ಅವರೇ ಆಶ್ರಯ ಮನೆಗಳನ್ನು ಹಂಚಬೇಕು, ಅವರೆ ಸಂಧ್ಯಾ ಸುರಕ್ಷಾ ಕಾರ್ಡ್‌ಗಳನ್ನು ಹಂಚಬೇಕು, ನಾಮಕಾವಸ್ತೆ ನಾವು ಬೆಳಗಾಂ ಜಿಲ್ಲೆಯಲ್ಲಿ ಎಂಎಲ್‌ಎ ಗಳಾಗಿದ್ದೇವೆ. ಪ್ರತಿಯೊಂದು ಕಾರ್ಯಕ್ರಮಗಳನ್ನು ಅವರೇ ಮಾಡುವುದಾದರೆ ನಾವು ಏತಕ್ಕಾಗಿ ಬೇಕು ಹೇಳಿ. ಆದರೆ ಮೊನ್ನೆ ಒಂದು ಸಮಸ್ಯೆಯಾಯಿತು. ಮಾನ್ಯ ಮುಖ್ಯಮಂತ್ರಿಗಳು.....

ಅಧ್ಯಕ್ಷರು :- ಅಯಿತು. ತಾವು details ಕಳುಹಿಸಿಕೊಡಿ. ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಚರ್ಚೆ ಇದೆ. ಅದರ ಬಗ್ಗೆ ಏನಾದರೆ ಮಾತನಾಡುವುದು ಇದ್ದರೆ ಮಾತನಾಡಿ. ನೀವೇಲ್ಲರೂ ಶಾಸಕರು ತಮ್ಮ ಸಮಸ್ಯೆಗಳನ್ನು ಹೇಳುತ್ತಾ ಕುಳಿತುಕೊಂಡರೆ ಸಾರ್ವಜನಿಕರ ಸಮಸ್ಯೆಗಳನ್ನು ಹೇಳುವವರು ಯಾರು? ನಾವು ನಿಮ್ಮ ಸಮಸ್ಯೆಗಳನ್ನು ಕೇಳುವುದೇ ಅಯಿತಲ್ಲಾ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಪೊಲೀಸ್ ಇಲಾಖೆ ಕಾನೂನು ಇಲಾಖೆಯ ಅಡಿಯಲ್ಲಿ ಬರುತ್ತದೆ.

ಅಧ್ಯಕ್ಷರು :- ನನಗಂತೂ ಏನು ಅರ್ಥವಾಗುತ್ತಿಲ್ಲ. ಎಲ್ಲಾ ಶಾಸಕರೂ ಕೂಡ ಅರ್ಥ ಮಾಡಿಕೊಳ್ಳಬೇಕು. ಎಲ್ಲಾ ನಿಮ್ಮ ಸಮಸ್ಯೆಗಳನ್ನು ಕೇಳುವುದಾಯಿತಲ್ಲಾ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ನಾವು ಇನ್ನೇನು ಅರ್ಥ ಮಾಡಿಕೊಳ್ಳಬೇಕೆಂದು ಗೊತ್ತಿಲ್ಲ.

ಅಧ್ಯಕ್ಷರು :- ಮಾನ್ಯ ಧ್ರುವನಾರಾಯಣರವರೆ ತಾವು ಮಾತನಾಡಿ.

ಶ್ರೀ ಆರ್. ಧ್ರುವನಾರಾಯಣ್ (ಸಂತೇಮರಳ್ಳಿ):- ಮಾನ್ಯ ಅಧ್ಯಕ್ಷರೇ, ಕಾನೂನು ಸುವ್ಯವಸ್ಥೆ ಬಗ್ಗೆ ನಮ್ಮ ಉಪ ನಾಯಕರಾದ ಶ್ರೀ ಟಿ.ಬಿ.ಜಯಚಂದ್ರರವರು ಮಾತನಾಡುವ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರವರ ಹೆಸರಿನಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಈ ಭಯೋತ್ಪಾದನೆ ವಿಚಾರವಾಗಿ ಅವರಲ್ಲಿ ಅರಿವು ಮೂಡಿಸುವುದಕ್ಕೆ ಈಗಾಗಲೇ ಚಾಲನೆ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಭಯೋತ್ಪಾದನೆ ಜೊತೆಗೆ ಅದಕ್ಕಿಂತ ಭೀಕರವಾಗಿ ಅಸ್ಪೃಶ್ಯತೆ ಬಹಳಷ್ಟು ತಾಂಡವವಾಡುತ್ತಿದೆ. ಅಸ್ಪೃಶ್ಯತೆ ಇವತ್ತಿಗೂ ಕೂಡ ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಬಹಳ ಜೀವಂತವಾಗಿರುವಂಥದ್ದು. ಪ್ರತಿಯೊಂದು ಗ್ರಾಮದಲ್ಲೂ ಕೂಡ ಒಂದು ಕೆರೆಯಿದ್ದರೆ ಆ ಕೆರೆಯಿಂದ ಅಸ್ಪೃಶ್ಯರು ನೀರು ತೆಗೆದುಕೊಂಡು ಹೋಗುವುದಕ್ಕೆ ಅವಕಾಶಗಳಿಲ್ಲ. ಇಂಥ ಸಂದರ್ಭದಲ್ಲಿ ನಾನು ರಾಜ್ಯ ಸರ್ಕಾರದವರಿಗೆ ಮನವಿ ಮಾಡತಕ್ಕಂಥದ್ದು ಈ ಅಸ್ಪೃಶ್ಯತೆಯ ವಿರುದ್ಧ ಅಸ್ಪೃಶ್ಯತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ತಾವು ಯಾವ ರೀತಿ ಈ ಒಂದು ಭಯೋತ್ಪಾದನೆಯ ವಿರುದ್ಧವಾಗಿ ಜನಜಾಗೃತಿ ಮೂಡಿಸುವಲ್ಲಿ ಈ ಕಾಲೇಜು ವಿದ್ಯಾರ್ಥಿಗಳಿಗೆ ಬೋಧನೆ ಮಾಡುವಿರೋ ಇದನ್ನು ಕೂಡ ಮಾಡಬೇಕು ಎನ್ನುವ ಒತ್ತಾಯವನ್ನು ಮಾನ್ಯ ಅಧ್ಯಕ್ಷರ ಪರವಾಗಿ ಸರ್ಕಾರದಲ್ಲಿ ಮನವಿಯನ್ನು ಮಾಡುತ್ತೇನೆ.

ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು) :- ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಈ ಕರಾವಳಿ ಜಿಲ್ಲೆಗಳು ಒಂದು ರೀತಿಯಾಗಿ ಸುರಕ್ಷಿತವಾಗಿಲ್ಲದಿರುವ ಒಂದು ಸನ್ನಿವೇಶದಲ್ಲಿ ಆಂತರಿಕ ಹಾಗು ಬಾಹ್ಯವಾಗಿರುವಂಥ ಟೆರರಿಸಂ ಚಟುವಟಿಕೆಯ ನೆಲೆಗಳು, ಕೊಂಡಿಗಳು ಅಲ್ಲಿ ಬೇರೂರುತ್ತಿರುವ ಒಂದು ಹಿನ್ನೆಲೆಯಲ್ಲಿ ಸರ್ಕಾರ ವಿಶೇಷವಾಗಿರುವಂಥ ಮುತುವರ್ಜಿಯನ್ನು ವಹಿಸಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಕಳಕಳಿಯಿಂದ ವಿನಂತಿಸುತ್ತಿದ್ದೇನೆ. ಬೇನಾಮಿ ಹೆಸರಿನಲ್ಲಿ ಆಸ್ತಿ